# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

KANNADA POST

ಸಂಪಾದಕ : ಮಂಜು ಬನವಾಸೆ

ಕನ್ನಡ ದಿನ ಪತ್ರಿಕೆ Kannada Daily

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 121 | Pages. 2 | Date: 13-03-2025, THURSDAY | RNI NO: KARKAN/2024/89601

ಸಂಪುಟ : 01 - ಸಂಚಿಕೆ : 121 - ಪುಟಗಳು : 2 - 13 ಮಾರ್ಚ್ 2025 ಗುರುವಾರ | Ph: 8762954248 | ದರ : ₹1


# ಸಕಲೇಶಪುರಕ್ಕೆ ಅಫ್ಘನ್ ಪಠಾಣ ಮುಸ್ಲಿಮರು ಬಂದಿದ್ದು ಹೇಗೆ?

## ಸಕಲೇಶಪುರಕ್ಕೆ ಶಾಪ್ ಸಿದ್ದೇಗೌಡರ ಕೊಡುಗೆ ಏನು? | ಜನಪದ ಜಂಗಮನ ತವರೂರ ಇತಿಹಾಸ ಅಚ್ಚರಿದಾಯಕ

ಜನಪದ ವಿದ್ವಾಂಸ ಕರೀಂಖಾನ್ ಅವರು ಸಕಲೇಶಪುರದಿಂದ ಬೆಂಗಳೂರಿಗೆ ತೆರಳಿದ ನಂತರದ ಅವರ ಬದುಕು, ಸಾಧನೆಗಳ ಮಾಹಿತಿ ದೊರೆಯುತ್ತದೆ. ಆದರೆ ಮೂಲತಃ ಅಫಘಾನಿಸ್ತಾನದ ಪಠಾಣ ಮುಸ್ಲಿಮರಾದ ಅವರ ಕುಟುಂಬ ಇಲ್ಲಿಗೆ ಬಂದಿದ್ದು ಹೇಗೆ? ಅವರು ಇಲ್ಲಿ ನೆಲೆ ನಿಂತಿದ್ದು ಹೇಗೆ? ಇತ್ಯಾದಿಗಳ ಬಗ್ಗೆ ಸ್ಪಷ್ಟವಾದ ದಾಖಲೆಗಳು ನಮಗೆ ಕಾಣಸಿಗುವುದಿಲ್ಲ.

ನಾನು ಈ ಭಾಗದ ಹಿರಿಯರನ್ನು ಮಾತನಾಡಿಸಿ ಸಂಗ್ರಹಿಸಿದ ಮಾಹಿತಿಗಳ ಪ್ರಕಾರ ಎಸ್.ಕೆ.ಕರೀಂಖಾನ್ ಅವರ ಕುಟುಂಬ ಸಕಲೇಶಪುರಕ್ಕೆ ಬಂದು ನೆಲೆಸಲು ಶಾಪ್ ಸಿದ್ದೇಗೌಡ ಕುಟುಂಬದ ಪಾತ್ರ ಬಹಳ ಪ್ರಮುಖವಾದದ್ದು. ಅದು ಸಕಲೇಶಪುರದ ಇತಿಹಾಸದಲ್ಲಿ, ಅಭಿವೃದ್ಧಿಯಲ್ಲಿ ನಿರಂತರವಾಗಿ ಪಾತ್ರ ವಹಿಸಿದ ಕುಟುಂಬವದು.



**ಕನ್ನಡ ಪೋಸ್ಟ್ ವಿಶೇಷ**

ಅಫಘಾನಿಸ್ತಾನದಲ್ಲಿದ್ದ ಯೋಧ ಕರೀಂಖಾನ್ ಅವರ ತಂದೆ ಖಾನ್ ಅಬ್ದುಲ್ ರೆಹಮಾನ್ ಖಾನ್ ಬ್ರಿಟೀಷರ ವಿರುದ್ಧ ಹೋರಾಡಿದ್ದ ಯೋಧ. ಅಲ್ಲಿ ಅಫಘಾನಿಸ್ತಾನ ಸೋತು ಬ್ರಿಟೀಷರ ವಶವಾಗುತ್ತದೆ. ಇದೆಲ್ಲ ಆದ ನಂತರ ಬ್ರಿಟೀಷ್ ಆಡಳಿತದ ಭಾರತದಲ್ಲಿ ಪಠಾಣ್ ಸಮುದಾಯ ಹಾಗೂ ಬ್ರಿಟೀಷರ ನಡುವೆ ತಿಕ್ಕಾಟ ಆರಂಭವಾಗುತ್ತದೆ. ಆಗ ಬ್ರಿಟೀಷರ ಪರವಾಗಿ ರಾಜಿ-ಸಂಧಾನ ಮಾಡಲು ರೆಹಮಾನ್ ಖಾನ್ ಅವರನ್ನು ಬ್ರಿಟೀಷ್ ಸರ್ಕಾರದ ಪ್ರತಿನಿಧಿಯಾಗಿ ಕಳುಹಿಸಲಾಗುತ್ತದೆ.

ಅವರು ಮದ್ರಾಸ್ ಗೆ ಬರುತ್ತಾರೆ. ಅಲ್ಲಿ ಮಾತುಕತೆ ನಡೆದು ಸಮಸ್ಯೆ ಬಗೆಹರಿಯುತ್ತದೆ. ನಂತರ ಭಾರತ ಸುತ್ತಾಡಲು ಹೊರಡುವ ಅವರಿಗೆ ಆಗಿನ ಮಂಜ್ರಾಬಾದ್ ಪ್ರಾಂತ್ಯದಲ್ಲಿ ಅಫಘಾನಿಸ್ತಾನ ಮೂಲದ ಪಠಾಣರಿದ್ದಾರೆ ಎಂದು ಗೊತ್ತಾಗುತ್ತದೆ. ರೆಹಮಾನ್ ಖಾನ್ ಅವರನ್ನು ಹುಡುಕಿಕೊಂಡು ಇಂದಿನ ಸಕಲೇಶಪುರ, ಅಂದಿನ ಮಂಜ್ರಾಬಾದ್‌ಗೆ ಬರುತ್ತಾರೆ.

ಜನಪದ ಜಂಗಮ ಕರೀಂಖಾನ್ ಅವರ ತಂದೆ ಮೂಲತಃ ಅಫಘಾನಿಸ್ತಾನದ ಪಠಾಣ ಸಮುದಾಯಕ್ಕೆ ಸೇರಿದವರು. ಅಲ್ಲಿ ಯೋಧರಾಗಿದ್ದ ಅವರು ಬ್ರಿಟೀಷರ ವಿರುದ್ಧ ಯುದ್ಧದಲ್ಲಿ ಅವರ ದೇಶ ಸೋತಿದ್ದರಿಂದ ಅವರು ಬ್ರಿಟೀಷ್ ಸೈನಿಕರಾಗಿದ್ದರು. ಅಂತಹ ವ್ಯಕ್ತಿಯೊಬ್ಬರು ಸಕಲೇಶಪುರಕ್ಕೆ ಬಂದು ನೆಲೆಸಿದ್ದು, ಅವರ ಕುಟುಂಬದ ಕುಡಿ ಕರೀಂಖಾನ್ ಜನಪದ ವಿದ್ವಾಂಸರಾಗಿ ಬೆಳೆದು ಕನ್ನಡ ಸಾಹಿತ್ಯ ಪ್ರಪಂಚವನ್ನು ಶ್ರೀಮಂತಗೊಳಿಸಲು ಕಾರಣವಾದ ವ್ಯಕ್ತಿ, ಸಂದರ್ಭಗಳು ಅಚ್ಚರಿದಾಯಕ ಹಾಗೂ ಇತಿಹಾಸ ಆಸಕ್ತರ ಪಾಲಿಗೆ ಅಧ್ಯಯನ ಯೋಗ್ಯವೂ ಹೌದು. ಈಚೆಗೆ ರಕ್ಷಿದಿಯಲ್ಲಿ ಆಯೋಜಿಸಿದ್ದ ಪ್ರಶಸ್ತಿ ಪ್ರದಾನ ಸಮಾರಂಭದ ವೇದಿಕೆಯಲ್ಲಿ ಹಿರಿಯ ರಂಗಕರ್ಮಿ ರಕ್ಷಿದಿ ಪ್ರಸಾದ್ ಅವರು ಕರೀಂಖಾನ್ ಕುಟುಂಬದ ಜತೆ ಜತೆಗೆ ಸಕಲೇಶಪುರದ ಇತಿಹಾಸದ ಮೇಲೆಯೂ ಬೆಳಕು ಚೆಲ್ಲುವಂತೆ ಮಾತನಾಡಿದರು. ಅವರ ಮಾತಿನ ಪೂರ್ಣಪಾಠ ಇಲ್ಲಿದೆ.



### ಶಾಪ್ ಸಿದ್ದೇಗೌಡ ಚಿನ್ನದ ಪದಕ...

ಅಂದು ಶಾಪ್ ಸಿದ್ದೇಗೌಡ ಆ ಕಾಲದಲ್ಲಿ ಇಂತಹ ಹಲವಾರು ಕೆಲಸಗಳನ್ನು ಮಾಡಿದರು. ಬ್ರಿಟೀಷರ ಜತೆ ಒಡನಾಡಿದ ಸಿದ್ದೇಗೌಡರ ಮೂರನೇ ಮಗ ಶಾಪ್ ಸಿದ್ದೇಗೌಡರ ಹೆಸರಿನಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಇಂದಿಗೂ ಕನ್ನಡ ಎಂಎಯಲ್ಲಿ ಅತೀ ಹೆಚ್ಚು ಅಂಕ ಪಡೆಯುವ ವಿದ್ಯಾರ್ಥಿಗಳಿಗೆ ಶಾಪ್ ಸಿದ್ದೇಗೌಡ ಚಿನ್ನದ ಪದಕ ನೀಡಲಾಗುತ್ತಿದೆ. ಶಾಪ್ ಸಿದ್ದೇಗೌಡರು ಬ್ರಿಟೀಷರ ಜತೆ ಓಡಾಡಿದರು. ಕಂಟ್ರಾಕ್ಟ್ ಕೆಲಸ ಮಾಡಿಸಿದರು. ಅವರ ಹೆಸರಿನಲ್ಲಿ ಇಂದು ಕನ್ನಡ ಭಾಷಾ ವಿಷಯಕ್ಕೆ ಚಿನ್ನದ ಪದಕದ ಹೆಸರಿನಲ್ಲಿ ಶಾಶ್ವತವಾಗಿದ್ದಾರೆ. ಕರೀಂಖಾನ್ ಅವರು ಸಿದ್ದೇಗೌಡರಿಂದಾಗಿ ಕನ್ನಡಕ್ಕೆ ದಕ್ಕಿದರು.



### ಇಂಗ್ಲೆಂಡ್ ವಸ್ತುವಿನ ಮೇಲೆ ಶಾಪ್ ಸಿದ್ದೇಗೌಡ ಹೆಸರು

ಹಾಗೆ ಇಲ್ಲಿಗೆ ಬಂದ ಖಾನ್ ಅಬ್ದುಲ್ ರೆಹಮಾನ್ ಖಾನ್ ಅವರಿಗೆ ಆಶ್ರಯ ನೀಡಿದವರು ಇದೇ ಸಿದ್ದೇಗೌಡರು. ಅವರ ನಂತರ ಸಕಲೇಶಪುರದ ಸರ್ವ ಸರಕಿನ ಅಂಗಡಿಯ ಭಾರೀ ಖ್ಯಾತಿ ಸಂಪಾದಿಸುತ್ತದೆ. ಈ ಅಂಗಡಿಯ ಜಾಹೀರಾತು ಇಂಗ್ಲೆಂಡ್ ತಲುಪಿರುತ್ತದೆ. ಅಲ್ಲಿನ ಉತ್ಪನ್ನಗಳ ಮೇಲೆ ಸ್ಪೆಷಲಿ ಮೇಡ್ ಫಾರ್ ಶಾಪ್ ಸಿದ್ದೇಗೌಡ, ಕರ್ನಾಟಕ. ಎಂದು ಮುದ್ರಿಸಲಾಗಿರುತ್ತದೆ. ಅದರ ಫೋಟೋ ಪ್ರತಿ ಇಂದಿಗೂ ದಾಖಲೆಯಾಗಿ ಉಳಿದಿದೆ. ಅಂತಹ ಹೆಸರಾಂತ ಮಳಿಗೆಯಲ್ಲಿ ಕೆಲಸ ಮಾಡುತ್ತಿದ್ದ ಪಠಾಣರನ್ನು ನೋಡಲು ಕರೀಂಖಾನ್ ಇಲ್ಲಿಗೆ ಬರುತ್ತಾರೆ. ನೋಡಿ ಅವರನ್ನು ಮಾತಾಡಿಸಿ ಅಫಘಾನಿಸ್ತಾನಕ್ಕೆ ಮರಳುತ್ತಾರೆ. ಆದರೆ ಹೋದ ಮೇಲೆ ಅವರಿಗೆ ಏನನ್ನಿಸಿತ್ತೋ ಏನೋ ನಾನು ಭಾರತದಲ್ಲಿ ಇರುಬೇಕು, ಅದರಲ್ಲೂ ಮಲೆನಾಡು ಸಕಲೇಶಪುರದಲ್ಲಿರಬೇಕು ಎನ್ನುವ ಭಾವನೆ ತೀವ್ರವಾಗಿ ಇಲ್ಲಿಗೆ ಬಂದು ಬಿಡುತ್ತಾರೆ.

ಇಲ್ಲಿ ಅಫಘನ್ನರು ಮಾತನಾಡುತ್ತಿದ್ದ ಪುಷ್ತು ಭಾಷೆ ಸಿದ್ದೇಗೌಡರಿಗೆ ಅಲ್ಪಸ್ವಲ್ಪ ಬರುತ್ತಿತ್ತು. ನಾನು ಇಲ್ಲೇ ಇರುತ್ತೇನೆ ಎನ್ನುವ ರೆಹಮಾನ್ ಖಾನ್ ಅವರಿಗೆ ನಿಮಗೇನು ಹುಚ್ಚು ಹತ್ತಿದೆಯೇ? ನೀವು ಇಲ್ಲೇನು ಯುದ್ಧ ಮಾಡುತ್ತೀರಾ? ಎಂದು ಸೈನಿಕರಾಗಿದ್ದ ಅವರನ್ನು ಸಿದ್ದೇಗೌಡರು ಪ್ರಶ್ನಿಸುತ್ತಾರೆ. ಆಗ ಅವರು ನನಗೆ ಯುನಾನಿ ವೈದ್ಯಕೀಯ ಪದ್ಧತಿ ಗೊತ್ತಿದೆ. ಟೈಲರಿಂಗ್ ಮಾಡುತ್ತೇನೆ ಎನ್ನುತ್ತಾರೆ. ಆಗ ಸಿದ್ದೇಗೌಡರು ಅವರಿಗೆ ಟೈಲರಿಂಗ್, ಬಟ್ಟೆ ಅಂಗಡಿ ಹಾಕಿಕೊಟ್ಟು ಇಲ್ಲಿಯೇ ಯುನಾನಿ ಚಿಕಿತ್ಸಾ ಕೇಂದ್ರ ನಡೆಸುವಂತೆ ಹೇಳುತ್ತಾರೆ.

ವಾಸಕ್ಕೆ ಒಂದು ಮನೆಯನ್ನೂ ನೀಡುತ್ತಾರೆ. ಶಾಪ್ ಸಿದ್ದೇಗೌಡ ಶಾಲೆಯ ಹಿಂಭಾಗದಲ್ಲಿ ಇಂದಿಗೂ ಆ ಮನೆ ಇದೆ. ಈಗ ಪಾತ್ರೆ ಅಂಗಡಿಯ ಸ್ಟೀವನ್ ಅವರನ್ನು ಅದನ್ನು ಕೊಂಡುಕೊಂಡಿದ್ದಾರೆ.

ಹೀಗೆ ಬಂದ ರೆಹಮಾನ್ ಖಾನ್ ಇಲ್ಲಿನವರಾದರು, ಕನ್ನಡಿಗರಾದರು. ಅವರ ಮಕ್ಕಳನ್ನು ಕನ್ನಡಿಗರಾಗಿ ಬೆಳೆಸಿದರು. ಕರೀಂಖಾನ್ ಅವರು ಎಂಟನೇ ತರಗತಿ ವ್ಯಾಸಂಗ ಮಾಡುತ್ತಿದ್ದಾಗ ರೆಹಮಾನ್ ಖಾನ್ ತೀರಿಕೊಂಡಿದ್ದರಿಂದ ಕರೀಂ ಖಾನ್ ವಿದ್ಯಾಭ್ಯಾಸ ಮುಂದುವರಿಸಲು ಆಗಲಿಲ್ಲ. ಅವರು ದೇವಸ್ಥಾನಗಳಿಗೆ ಹೋಗಿ ಶ್ಲೋಕ ಅಭ್ಯಾಸ ಮಾಡುತ್ತಿದ್ದರು. ನಂತರ ಆಚಂಗಿ ನಾರಾಯಣ ಶಾಸ್ತ್ರಿಗಳ ಬಳಿ ಆರೇಳು ವರ್ಷ ಸಂಸ್ಕೃತ ಮತ್ತು ಕನ್ನಡ ಅಭ್ಯಾಸ ಮಾಡಿದರು. ದೊಡ್ಡ ವಿದ್ವಾಂಸರಾದರು.

## ಮಾಂಸ ಮಾರಾಟಕ್ಕೆ, ಕಾಫಿ ವ್ಯಾಪಾರ ರಕ್ಷಣೆಗೆ ಪಠಾಣರ ನೇಮಕ

ರೆಹಮಾನ್ ಖಾನ್ ಸಕಲೇಶಪುರಕ್ಕೆ ಬಂದಾಗ ಇಲ್ಲಿ ಆಗ ಸಿದ್ದೇಗೌಡ ಎನ್ನುವ ಒಬ್ಬ ವ್ಯಕ್ತಿ ಇರುತ್ತಾರೆ. ಆಗಿನ್ನೂ ಅವರಿಗೆ ಶಾಪ್ ಸಿದ್ದೇಗೌಡ ಎನ್ನುವ ಹೆಸರು ಬಂದಿರಲಿಲ್ಲ ಎನ್ನಿಸುತ್ತದೆ. ಅವರು ಆ ಕಾಲದಲ್ಲಿ ರಸ್ತೆ ಗುತ್ತಿಗೆದಾರರಾಗಿದ್ದರು. ಅವರೇ ಹಾಸನ-ಮಂಗಳೂರು ನಡುವಿನ ರಸ್ತೆ ನಿರ್ಮಿಸಿದ ಗುತ್ತಿಗೆದಾರ. ಫ್ರೆಂಚ್ ಇಂಜಿನಿಯರ್ ಜತೆ ಸೇರಿ ಈ ಭಾಗದ ಹಲವು ಕಬ್ಬಿಣದ ಸೇತುವೆಗಳನ್ನು ನಿರ್ಮಾಣ ಮಾಡಿದ್ದೂ ಅವರೇ. ಅವರು ಮಂಗಳೂರು ಹಾಗೂ ಮದ್ರಾಸ್ ಬಂದರುಗಳಲ್ಲಿ ಕಾಫಿ ವ್ಯಾಪಾರ (ಕಾಫಿ ಬೀಜ ರಫ್ತು ವ್ಯವಹಾರ) ನಡೆಸುತ್ತಿದ್ದರು.

ಹೀಗಾಗಿ ಅವರು ಕೆಲವು ಭಾಷೆಗಳು ಕಲಿತಿದ್ದರು. ಅವರು ಸಕಲೇಶಪುರದಲ್ಲೊಂದು ಅಂಗಡಿ ತೆರೆಯಲು ನಿರ್ಧಾರ ಮಾಡಿದರು. ಅದಕ್ಕೆ ಕಾರಣವೂ ಸ್ವಾರಸ್ಯಕರವಾಗಿದೆ. ಮದ್ರಾಸ್ ಗೆ ಹೋಗಿದ್ದಾಗ ಅಲ್ಲಿ ಸ್ಪೆನ್ಸರ್ ಅಂಡ್ ಕಂಪೆನಿ ಅನ್ನುವ ಹೆಸರಿನ, ಈ ಕಾಲದ ಸೂಪರ್ ಮಾರ್ಕೆಟ್ ಗಳನ್ನು ಹೋಲುವ ದೊಡ್ಡ ಅಂಗಡಿಯೊಂದನ್ನು ಅವರು ನೋಡಿದ್ದರು. ಅದರಿಂದ ಪ್ರೇರಿತರಾಗಿ ಅವರು ಸಕಲೇಶಪುರದಲ್ಲೂ ಅಂತಹ ಒಂದು ಸರ್ವ ಸರಕಿನ ಮಳಿಗೆ ತೆರೆದರು.


ಆಗ ಹಾಸನ ಜಿಲ್ಲೆಯಾಗಿರಲಿಲ್ಲ. ಕಡೂರು ಜಿಲ್ಲೆ, ಹಿರೀಸಾವೆ ತಾಲೂಕಾಗಿತ್ತು. ಸಕಲೇಶಪುರ ತಾಲೂಕು ಕೇಂದ್ರವಾಗಿತ್ತು. ಅಂತಹ ಕಾಲದಲ್ಲಿ ಹಾಸನದಲ್ಲಿ ಕೇವಲ ಸಂತೆ ದಿನವಾದ ಮಂಗಳವಾರ ಮಾತ್ರವೇ ಅಂಗಡಿಗಳು ತೆರೆಯುತ್ತಿದ್ದವು. ಉಳಿದ ದಿನಗಳಲ್ಲಿ ಬಾಗಿಲು ಮುಚ್ಚಿರುತ್ತಿದ್ದವು. ಆದರೆ ಸಕಲೇಶಪುರ ಸಿದ್ದೇಗೌಡರ ಶಾಪ್, ಸೋಮವಾರ ಹೊರತುಪಡಿಸಿ ವಾರದ ಆರು ದಿನಗಳು ವ್ಯವಹಾರ ನಡೆಸುತ್ತಿತ್ತು. ಅಲ್ಲಿ ಎಲ್ಲ ರೀತಿಯ ವಸ್ತುಗಳೂ ದೊರೆಯುತ್ತಿದ್ದವು. ಧರ್ಮದಿಂದ ಲಿಂಗಾಯತರಾದ ಸಿದ್ದೇಗೌಡರು ಅವರ ಅಂಗಡಿಯಲ್ಲಿ ಮಾಂಸವನ್ನೂ ಮಾರಾಟ ಮಾಡುತ್ತಿದ್ದರು. ಆ ವಿಭಾಗವನ್ನು ನೋಡಿಕೊಳ್ಳಲೆಂದು ಅವರು ಪಠಾಣರನ್ನು ತಂದಿರಿಸಿಕೊಂಡಿದ್ದರು.

ಅಲ್ಲದೇ ಕಾಫಿ ವ್ಯಾಪಾರ ಕೂಡ ನಡೆಸುತ್ತಿದ್ದ ಸಿದ್ದೇಗೌಡರು ಆಗಿನ ಕಾಲದಲ್ಲಿ ಕಾಫಿಯನ್ನು ಬಂದರಿಗೆ ಸಾಗಿಸುವಾಗ ಮಾರ್ಗ ಮಧ್ಯ ನಡೆಯುತ್ತಿದ್ದ ರಸ್ತೆ ದರೋಡೆಯಿಂದ ರಕ್ಷಣೆಗಾಗಿ ರಾಮನಗರದಿಂದ ಕೆಲವು ಮುಸ್ಲಿಮರನ್ನು ಬಾಡಿ ಗಾರ್ಡ್ ಗಳಾಗಿ ಕರೆತಂದಿದ್ದರು. ಆ ಕುಟುಂಬಗಳು ಟಿಪ್ಪುವಿನ ಸೈನ್ಯದಲ್ಲಿ ಸೇವೆ ಸಲ್ಲಿಸಿದ್ದ ಅನುಭವಿಗಳಾಗಿದ್ದರು.

ಟಿಪ್ಪುವಿನ ಮರಣಾನಂತರ ಅವನ ಸೈನ್ಯ ವಿಸರ್ಜನೆಯಾಗಿತ್ತು. ಆ ಯೋಧರನ್ನು ಸಿದ್ದೇಗೌಡರು ಸಕಲೇಶಪುರಕ್ಕೆ ಕರೆತಂದಿದ್ದರು. ಆ ಕುಟುಂಬಗಳು ಇಂದಿಗೂ ಸಕಲೇಶಪುರದಲ್ಲಿವೆ. ಅವರ ಮನವಿಗೆ ಸ್ಪಂದಿಸಿ ಸಿದ್ದೇಗೌಡರು ಮಸೀದಿ ನಿರ್ಮಾಣಕ್ಕೆ ಜಾಗ ತೋರಿ ಸಹಾಯವನ್ನೂ ಮಾಡಿದರು. ಆಗ ನಿರ್ಮಾಣವಾಗಿದ್ದೇ ಈಗ ದೊಡ್ಡಮಸೀದಿಯೆಂದು ಗುರುತಿಸುವ ಲಾಬಾ ಬಿನ್ ಮಸೀದಿ. ಹೀಗಾಗಿ ಮಸೀದಿಯಲ್ಲಿ ಪ್ರತಿ ವರ್ಷ ಒಂದು ದಿನ ಅವರ ಕುಟುಂಬದವರನ್ನು ಗೌರವಿಸುವ ಪರಿಪಾಠ ಹಿಂದಿನಿಂದ ನಡೆದು ಬಂದಿತ್ತು.

# ಮೊದಲ ಮಳೆ ಸಿಂಚನ

## ಗುಡುಗು, ಸಿಡಿಲು ಆರ್ಭಟ ರೈತರ ಮೊಗದಲ್ಲಿ ಮಂದಹಾಸ



ಹಾಸನ: ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಬುಧವಾರ ಸಂಜೆ ಭಾರಿ ಬಿರುಗಾಳಿ ಸಿಡಿಲುಗಳೊಂದಿಗೆ ವರ್ಷದ ಮೊದಲ ಮಳೆ ಆರ್ಭಟಿಸಿತು. ಸುಂಟರಗಾಳಿ ಆತಂಕ ಸೃಷ್ಟಿಸಿದರೂ ವರುಣ ಬೇಸಿಗೆ ಝಳದಿಂದ ತತ್ತರಿಸಿದ್ದ ಜನರ ಮೈಮನಗಳಿಗೆ ತಂಪೆರೆಯಿತು.

ಸಂಜೆ 6.45ರ ಸುಮಾರಿನಲ್ಲಿ ಇದ್ದಕ್ಕಿದ್ದಂತೆ ಎದ್ದ ಬಿರುಗಾಳಿ ನಗರದ ಹಲವು ಬಡಾವಣೆಗಳಲ್ಲಿ ಅಲ್ಲೋಲಕಲ್ಲೋಲವನ್ನೇ ಸೃಷ್ಟಿಸಿತು.

ತರಗೆಲೆ ಮಿಶ್ರಿತ ಧೂಳಿನ ಬಿರುಗಾಳಿಯಿಂದ ಮರ, ಗಿಡಗಳು ಓಲಾಡಿದವು. ಮರದ ಎಲೆ, ಕಾಯಿಗಳು ಉದುರಿ ರಸ್ತೆ ತುಂಬೆಲ್ಲ ಬಿದ್ದವು. ದ್ವಿಚಕ್ರ ವಾಹನ ಸವಾರರು ಭಯಭೀತರಾಗಿ ರಸ್ತೆಯಲ್ಲೇ ವಾಹನ ನಿಲ್ಲಿಸಿ ರಕ್ಷಣೆಗೆಂದು ಸಮೀಪದ ಕಟ್ಟಡಗಳ ಕಡೆಗೆ ಓಡಿದರು.

ಬಿರುಗಾಳಿ ಶಾಂತವಾದ ಬೆನ್ನಿಗೇ ಬಿರುಸಿನ ಮಳೆ ಆರಂಭವಾಯಿತು. ಕೇವಲ ಹತ್ತು ನಿಮಿಷಗಳ ಕಾಲ ಆರ್ಭಟಿಸಿದ ಮಳೆಯಿಂದ ನಗರ ತಂಪಾಯಿತು.

ಮುರಿದ ಬಿದ್ದ ಮರ: ನಗರದ ಶಂಕರಮಠದ ಆವರಣದಲ್ಲಿ ಭಾರಿ ಗಾಳಿಗೆ ಸಿಲುಕಿ ಸಂಪಿಗೆ ಮರವೊಂದು ಮುರಿದು ಬಿದ್ದಿದೆ. ಮಠದ ಆವರಣದಲ್ಲಿ ಭಜನೆಯಲ್ಲಿ ತೊಡಗಿದ್ದ ಹಲವು ಮಹಿಳೆಯರು ಕೂದಲೆಳೆ ಅಂತರದಲ್ಲಿ ಅಪಾಯದಿಂದ ಪಾರಾದರು.

ಪ್ರಯಾಣಿಕರ ಆಕ್ರೋಶ: ಚನ್ನರಾಯಪಟ್ಟಣಕ್ಕೆ ಬಂದು ಬಸ್ ನಿಲ್ಲುತ್ತಿದ್ದಂತೆ, ಕೆಲವರು ಇಂತಹ ಪರಿಸ್ಥಿತಿಯಲ್ಲಿ ನಾವು ಹೇಗೆ ಪ್ರಯಾಣ ಮಾಡಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದರು.



### ಜಿಲ್ಲೆಯಲ್ಲಿ ಮೊದಲ ಮಳೆ

ಜಿಲ್ಲೆಯಲ್ಲಿ ವರ್ಷದ ಮೊದಲ ಮಳೆ ಸುರಿದಿದ್ದು, ಜನರಲ್ಲಿ ಹರ್ಷ ಮೂಡಿಸಿದೆ. ವಿಶೇಷವಾಗಿ ಸಕಲೇಶಪುರ ತಾಲ್ಲೂಕಿನ ಹಲವೆಡೆ ಗುರುವಾರ ಉತ್ತಮ ಮಳೆಯಾಗಿದೆ. ಶುಕ್ರವಾರ ಸಂತೆ ಸುತ್ತಮುತ್ತ ವರುಣ ಕೃಪೆ ತೋರಿದ್ದಾನೆ.

ಬಿಸಿಲ ಬೇಗೆಗೆ ತತ್ತರಿಸಿದ್ದ ಜನತೆ ಹಾಗೂ ರೈತರಿಗೆ ಈ ಮಳೆ ತಂಪೆರೆದಿದ್ದು, ಭೂಮಿಗೂ ಚೈತನ್ಯ ತಂದಿದೆ. ಮುಂಗಾರು ಪೂರ್ವ ಮಳೆ ಆರಂಭವಾಗಿರುವುದು ಕೃಷಿಕರಿಗೆ ಆಶಾದಾಯಕವಾಗಿದೆ. ಬಿರುಸಿನ ಗಾಳಿ, ಸಿಡಿಲು-ಗುಡುಗು, ಮತ್ತು ಮಳೆಯಿಂದ ಜನತೆ ತಕ್ಷಣ ಹಿತಕರ ವಾತಾವರಣ ಅನುಭವಿಸಿದರೂ, ಕೆಲವು ಕಡೆ ತೊಂದರೆಗಳು ಉಂಟಾಗಿವೆ. ಹಾಸನದಿಂದ ಬೆಂಗಳೂರಿಗೆ ತೆರಳುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ (ಕೆಎ-18ಎಫ್-0913) ಮಳೆಯ ನಡುವೆ ವೈಪರ್ ಇಲ್ಲದೇ ಓಡಬೇಕಾದ ಪರಿಸ್ಥಿತಿ ಎದುರಿಸಿತು. ಬಸ್ ಚಾಲಕ ಮಳೆಯಿಂದ ಒಳಭಾಗದಲ್ಲಿ ಮೂಡುತ್ತಿದ್ದ ಮಂಜು ಹಾಗೂ ಹನಿಗಳನ್ನು ಕೈಯಿಂದ ಅಳಿಸುವ ಪ್ರಯತ್ನ ಮಾಡುತ್ತಿದ್ದರೆ, ಪ್ರಯಾಣಿಕರು ಆತಂಕಕ್ಕೆ ಒಳಗಾದರು. ವೈಪರ್ ಸ್ವಿಚ್ ಸರಿಯಾಗಿಲ್ಲದ ಕಾರಣ, ಚಾಲಕ ಮುಂದಿನ ದಾರಿಯು ಸ್ಪಷ್ಟವಾಗಿ ಕಾಣದೆ ತುಂಬಾ ಕಷ್ಟಪಟ್ಟರು.

ಕಷ್ಟಕರ ಸ್ಥಿತಿಯಲ್ಲಿ ಬಸ್ ಸಾಗುತ್ತಿರುವುದರಿಂದ ಕೆಲವರು ಟಿಕೆಟ್ ವಾಪಾಸ್ ನೀಡುವಂತೆ ಒತ್ತಾಯಿಸಿದರು.

ಬಸ್ ನಿರ್ವಾಹಕ ಬೇಸಿಗೆ ಸೀಸನ್ ಆದ್ದರಿಂದ ಬಸ್‌ನ ವೈಪರ್ ಚೆಕ್ ಮಾಡಿಲ್ಲ ಎಂಬ ಅಚ್ಚರಿಯ ಉತ್ತರ ನೀಡಿದ್ದು, ಪ್ರಯಾಣಿಕರ ಆಕ್ರೋಶಕ್ಕೆ ಕಾರಣವಾಯಿತು. ಸಂಚಾರದ ಹೊತ್ತಿಗೆ ಬಸ್ ವೈಪರ್ ಸರಿಪಡಿಸದ ಕಾರಣ, ಮಳೆಯ ಮಧ್ಯೆ ಪ್ರಯಾಣ ಮುಂದುವರಿಸಬೇಕಾದ ಸ್ಥಿತಿಯು ಸೃಷ್ಟಿಯಾಯಿತು.

ಚನ್ನರಾಯಪಟ್ಟಣ ವರದಿ: ತಾಲ್ಲೂಕಿನ ವಿವಿಧೆಡೆ ಬುಧವಾರ ಸಂಜೆ ಮಿಂಚು, ಗುಡುಗು ಹಾಗೂ ಬಿರುಗಾಳಿಯ ಅಬ್ಬರದೊಂದಿಗೆ ಮಳೆ ಸುರಿಯಿತು. ಕಳೆದ ಎರಡು ದಿನಗಳಿಂದ ಮೋಡ ಕವಿದ ವಾತಾವರಣ ನಿರ್ಮಾಣವಾಗಿತ್ತು.

ರಸ್ತೆ ಬದಿಯ ಚರಂಡಿಗಳು ತುಂಬಿ ಹರಿದವು. ಜಮೀನುಗಳಲ್ಲಿ ನೀರು ತುಂಬಿಕೊಂಡಿದೆ. ನಿರಂತರ ಲೋಡ್ ಶೆಡ್ಡಿಂಗ್‌ನಿಂದ ಬೆಳೆಗೆ ನೀರು ಹಾಯಿಸಲು ಪರದಾಡುತ್ತಿದ್ದ ರೈತರಿಗೆ ಮೊದಲ ಮಳೆಯ ಸಿಂಚನ ನೆಮ್ಮದಿ ತರಿಸಿದೆ.

# ಚುನಾವಣೆಯಲ್ಲಿ ಜನರ ಒಲವು-ನಿಲುವು ತಿಳಿಯುತ್ತೆ

## ಅಭಿವೃದ್ಧಿಗೆ ಅಡ್ಡಗಾಲು ಆಗಬೇಡಿ ಎಂದ ಮಾಜಿ ಸಚಿವ ರೇವಣ್ಣ



ಹೊಳೆನರಸೀಪುರ: ಅಭಿವೃದ್ಧಿ ವಿಚಾರದಲ್ಲಿ ರಾಜಕೀಯ ಮಾಡುವುದು ಬೇಡ. ಚುನಾವಣೆ ಬಂದಾಗ ರಾಜಕಾರಣ ಮಾಡಬಹುದು. ಆಗ ಜನರ ಒಲವು-ನಿಲುವು ಏನಿರುತ್ತದೆಯೋ ಅದೇ ಆಗುತ್ತದೆ ಎಂದು ಮಾಜಿ ಸಚಿವ ಹೆಚ್. ಡಿ. ರೇವಣ್ಣ ಅವರು ಸಂಸದ ಶ್ರೇಯಸ್ ಪಟೇಲ್ ಹೆಸರು ಹೇಳದೆ ತಿರುಗೇಟು ನೀಡಿದರು.

ಪಟ್ಟಣ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿ, ಅಭಿವೃದ್ಧಿಗೆ ಯಾರೂ ಅಡ್ಡಿಯಾಗಬಾರದು. ಶ್ರೀ ಲಕ್ಷ್ಮಿ ನರಸಿಂಹ ಸ್ವಾಮಿ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವ ಭಕ್ತರಿಗೆ ಪ್ರಸಾದ ವಿತರಣೆಯಲ್ಲೂ ರಾಜಕೀಯ ಮಾಡುತ್ತಿರುವುದು ಎಷ್ಟರ ಮಟ್ಟಿಗೆ ಸರಿ. ಮಾ. 13ರ ಗುರುವಾರ ಶ್ರೀ ಲಕ್ಷ್ಮಿ ನರಸಿಂಹಸ್ವಾಮಿ ರಥೋತ್ಸವ ಇದೆ. 25 ವರ್ಷಗಳಿಂದ ದೇವಾಲಯ ಅಭಿವೃದ್ಧಿ, ನೂತನ ರಥ ನಿರ್ಮಾಣಕ್ಕಾಗಿ ನಮ್ಮ ಕುಟುಂಬ ನೆರವಾಗಿದೆ. ಪ್ರಸಾದ ಹಂಚಲು ಸಂಸದರು ತಕರಾರು ಮಾಡಿದರೆ ಹೇಗೆ. ಹೀಗಾದರೆ ಭಕ್ತರಿಗೆ ನಾನು ಏನು ಉತ್ತರಿಸಬೇಕು. ದೇವರ ಪ್ರಸಾದದಲ್ಲೂ ರಾಜಕೀಯ ಮಾಡಿದರೆ ಏನು ಮಾಡುವುದು ಎಂದು ಅಸಮಧಾನ ವ್ಯಕ್ತಪಡಿಸಿದರು.

ತಹಶೀಲ್ದಾರ್ ರೇಣುಕುಮಾರ್ ಪ್ರತಿಕ್ರಿಯಿಸಿ, ಪೂರ್ವಭಾವಿ ಸಭೆಯಲ್ಲಿ ತೀರ್ಮಾನಿಸಿದಂತೆ ತಾಲ್ಲೂಕು ಆಡಳಿತದಿಂದ ಪ್ರಸಾದ ವಿನಿಯೋಗ ಮಾಡಲಾಗುವುದು ಎಂದರು.


ಮದ್ಯ ಸೇವಿಸಿ ಕರ್ತವ್ಯ: ಹಳ್ಳಿಮೈಸೂರು ಗ್ರಾಮದಲ್ಲಿ ಕರ್ತವ್ಯ ನಿರತ ಪೊಲೀಸರು ಬೆಳ್ಳಂ ಬೆಳಿಗ್ಗೆಯೇ ಮದ್ಯ ಸೇವನೆ ಮಾಡುತ್ತಾರೆ. ಸಮವಸ್ತ್ರದಲ್ಲಿದ್ದರೂ ಕುಡಿದು ಅನಾಗರಿಕರಂತೆ ವರ್ತಿಸುವುದು ಸರಿಯಲ್ಲ. ಪೊಲೀಸರ ವಿಡಿಯೋಗಳು ನನ್ನ ಬಳಿ ಇವೆ. ಮೇಲಾಧಿಕಾರಿಗಳು ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕು ಎಂದರು.

ಮಲ್ಲಪ್ಪನಹಳ್ಳಿ, ಹಳೆಕೋಟೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಶಾಸಕರಿಗೆ ತಲುಪಿಸಬೇಕೆಂದು ಕೆಲವು ಯೋಜನೆಗಳಡಿ ಬಿಲ್ ಮಂಜೂರು ಮಾಡಲು ಲಂಚ ಕೇಳುತ್ತಿದ್ದಾರೆ. ಈ ರೀತಿಯ ಆರೋಪಗಳನ್ನು ಸಹಿಸುವುದಿಲ್ಲ. ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಬೇಕು ಎಂದರು.

### ಇಂದು ಸಂಚಾರ ಬಂದ್

ಪಟ್ಟಣದ ಶ್ರೀ ಲಕ್ಷ್ಮಿನರಸಿಂಹಸ್ವಾಮಿ ಬ್ರಹ್ಮ ರಥೋತ್ಸವ ಅಂಗವಾಗಿ ಮಾ. 13ರ ಗುರುವಾರ ಪಟ್ಟಣದ ರಾಜ ಬೀದಿಗಳಲ್ಲಿ ವಾಹನ ಸಂಚಾರ ಬಂದ್ ಮಾಡಲಾಗಿದೆ. ರಥೋತ್ಸವದಲ್ಲಿ ಭಾಗವಹಿಸಲು ಗಾಂಧಿ ವೃತ್ತದ ಮೂಲಕ ಬರುವವರಿಗೆ ಮಹಾಗಣಪತಿ ಪೆಂಡಾಲ್ ಮುಂಭಾಗ ವಾಹನ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿದೆ. ಕಾಲುವೆ ಕವರ್ ಡೆಕ್ ಮೇಲೆ ಒಂದು ಬದಿ, ಬಾಬು ಜಗಜೀವನರಾಂ ವೃತ್ತದ ವರೆಗೆ ಖಾಲಿ ಪ್ರದೇಶದಲ್ಲಿ ಪಾರ್ಕಿಂಗ್ ಮಾಡಬಹುದು. ಮೈಸೂರು ರಸ್ತೆಯಿಂದ ದೇವರಾಜ ರಸ್ತೆ ಮಾರ್ಗವಾಗಿ ದೇವಾಲಯಕ್ಕೆ ತೆರಳುವ ಮಾರ್ಗದಲ್ಲಿ ಎಡಬದಿಯ ಖಾಲಿ ನಿವೇಶನಗಳಲ್ಲಿ ವಾಹನ ನಿಲ್ಲಿಸಬೇಕು. ಈ ಜಾಗ ಹೊರತುಪಡಿಸಿ ಬೇರೆ ಎಲ್ಲೂ ನಿಲುಗಡೆ ಮಾಡುವಂತಿಲ್ಲ. ರಥೋತ್ಸವ ವೇಳೆ ಪಾದಚಾರಿ, ವಾಹನ ಓಡಾಟದಿಂದ ಭಕ್ತರ ಸಂಚಾರಕ್ಕೆ ತೊಂದರೆಯಾಗದಂತೆ ವಾಹನ ಸಂಚಾರ ನಿಷೇಧಿಸಲಾಗಿದೆ.

### ಸಾಲಗಾರರ ಕಿರುಕುಳ: ಮಹಿಳೆ ಆತ್ಮಹತ್ಯೆ



ಆಲೂರು: ಸ್ವ ಸಹಾಯ ಗುಂಪು ಹಾಗೂ ಮೈಕ್ರೋ ಫೈನಾನ್ಸ್ ಕಿರುಕುಳ ಸಹಿಸಲಾಗದೆ ಮಹಿಳೆ ನೇಣು ಬಿಗಿದುಕೊಂಡು ಬುಧವಾರ ಆತ್ಮಹತ್ಯೆಗೆ ಶರಣಾಗಿದ್ದಾರೆ. ತಾಲ್ಲೂಕಿನ ಕೆ.ಹೊಸಕೋಟೆ ಹೋಬಳಿ ಹಳ್ಳಿಯೂರು ಗ್ರಾಮದ ಕೆಂಚಮ್ಮ (50) ಮೃತರು. ಏಳರಿಂದ ಎಂಟು ಮೈಕ್ರೋ ಫೈನಾನ್ಸ್‌ಗಳಲ್ಲಿ ಸಾಲ ಮಾಡಿದ್ದರು. ದಿನ ಬೆಳಗಾದರೆ ಹಣ ವಸೂಲಿಗೆಂದು ಮೈಕ್ರೋ ಫೈನಾನ್ಸ್ ಅವರ ಮನೆ ಬಾಗಿಲಿಗೆ ಬಂದು ಕಿರುಕುಳ ನೀಡುತ್ತಿದ್ದ ಹಿನ್ನೆಲೆಯಲ್ಲಿ ಸಂಘಕ್ಕೆ ಕಟ್ಟಲು ಹಣ ಇಲ್ಲದಿರುವ ಕಾರಣಕ್ಕೆ ಮನನೊಂದು ಮಾನಕ್ಕೆ ಹೆದರಿದ ಮಹಿಳೆ ಮನೆಯಲ್ಲಿಯೇ ನೇಣು ಬೀಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಸ್ಥಳಕ್ಕೆ ಆಲೂರು ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು. ಈ ಸಂಬಂಧ ಪ್ರಕರಣ ದಾಖಲಾಗಿದೆ.

# ಜೀತ ಪದ್ಧತಿ ಸಮಾಜಕ್ಕೆ ಅಂಟಿದ ಪಿಡುಗು

## ಕಾರ್ಯಾಗಾರದಲ್ಲಿ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ದಾಕ್ಷಾಯಿಣಿ



ಹಾಸನ: ಜೀತ ಪದ್ಧತಿ ಪುರಾತನ ಕಾಲದಿಂದಲೂ ಬೇರು ಬಿಟ್ಟರುವ ವ್ಯವಸ್ಥೆಯಾಗಿದೆ, ಇದನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ಜವಾಬ್ದಾರಿ ಎಲ್ಲರ ಮೇಲಿದೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರು ಕಾರ್ಯನಿರ್ವಹಿಸಬೇಕಾಗಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಕೆ ದಾಕ್ಷಾಯಿಣಿ ಹೇಳಿದರು.

ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯಿತಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಿಂದ ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಜೀತ ಪದ್ಧತಿ ನಿರ್ಮೂಲನಾ ದಿನಾಚರಣೆಯ ಅಂಗವಾಗಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಆಯೋಜಿಸಿದ್ದ ಒಂದು ದಿನದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಶ್ರೀಮಂತ ವರ್ಗದವರು ಸಾಲದ ರೂಪದಲ್ಲಿ ಹಣದ ಆಮಿಷ ಅಥವಾ ಮತ್ತಿತರ ರೀತಿಯ ಅನೇಕ ಆಮಿಷಗಳ ಒಡ್ಡಿ ಫಾರ್ಮ್ ಹೌಸ್‌ಗಳಲ್ಲಿ, ಗಣಿಗಾರಿಕೆ ಮತ್ತಿತರ ಕ್ಲಿಷ್ಟಕರ ಕೆಲಸಗಳಿಗೆ ಬಡತನದ ಜನರನ್ನು ನೇಮಿಸಿಕೊಂಡು ಜೀವನ ಪೂರ್ತಿ ಸಂಬಳ ರಹಿತವಾಗಿ ಕೆಲಸವನ್ನು ಮಾಡಿಸಿಕೊಳ್ಳುತ್ತಿದ್ದರು, ಈ ವ್ಯವಸ್ಥೆಯನ್ನು ನಿರ್ಮೂಲನೆ ಮಾಡಲು 1976ರಲ್ಲಿ ಜೀತ ಪದ್ಧತಿ ನಿರ್ಮೂಲನೆ ಕಾಯ್ದೆಯನ್ನು ಜಾರಿಗೆ ತರಲಾಗಿದೆ ಎಂದರು.

ಕೆಲ ವರ್ಷಗಳ ಹಿಂದೆ ಮಂಡ್ಯ, ನಾಗಮಂಗಲಗಳಲ್ಲಿ ಜೀತ ಪದ್ಧತಿಯಿಂದ ಕಾರ್ಮಿಕರ ನೋಡಿಕೊಳ್ಳುತ್ತಿದ್ದ ವ್ಯವಸ್ಥೆಯ ಕುರಿತು ವಿವರಿಸಿದರಲ್ಲದೆ, ಮಾಲೀಕರು ಜೀತ ಮಾಡುವ ವ್ಯಕ್ತಿಗಳಿಗೆ ಹೊರಗಿನ ಪ್ರಪಂಚದ ಅರಿವು ಬಾರದಂತೆ ನೋಡಿಕೊಳ್ಳುವುದರ ಜೊತೆಗೆ, ಅವರಿಗೆ ಹೊರಗೆ ಓಡಾಡಲು ಅವಕಾಶ ನೀಡದೆ, ಹೊರ ಜಗತ್ತಿನ ಸಂಬಂದವಿಲ್ಲದಂತೆ ಬದುಕು ಸಾಗಿಸುವಂತೆ ನೋಡಿಕೊಳ್ಳುತ್ತಾರೆ ಇದೊಂದು ಶೋಚನೀಯ ಸಂಗತಿ ಎಂದರು.

ಜಿಲ್ಲಾಧಿಕಾರಿ ಸಿ. ಸತ್ಯಭಾಮ ಮಾತನಾಡಿ, ಜೀತ ಪದ್ಧತಿ ಒಂದು ಸಾಮಾಜಿಕ ಪಿಡುಗಾಗಿದೆ. ಇದು ಬೇರೆ ಬೇರೆ ರೂಪದಲ್ಲಿ ಎಲ್ಲೆಡೆ ಪಸರಿಸಿಕೊಂಡಿದೆ, ಇದನ್ನು ಸಮಾಜದಲ್ಲಿರುವ ಎಲ್ಲರೂ ಒಟ್ಟುಗೂಡಿ ನಿರ್ಮೂಲನೆ ಮಾಡಲು ಕಾರ್ಯಪ್ರವೃತ್ತರಾಗಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಜೀತ ಪದ್ಧತಿಯಲ್ಲಿ ವೇತನವಿಲ್ಲದೆ ದುಡಿಯುವುದಲ್ಲದೆ ಜೊತೆಗೆ ಆ ಕಾರ್ಮಿಕನಿಗೆ ಯಾವುದೇ ರೀತಿಯ ಸ್ವಾತಂತ್ರ್ಯ, ಆತ್ಮಗೌರವವಿರುವುದಿಲ್ಲ ಮಾಲೀಕ ಹೇಳಿದ ಹಾಗೆ ಎಲ್ಲಾ ಕೆಲಸಗಳನ್ನು ಮಾಡಬೇಕು ಯಾವುದಕ್ಕೂ ಕೂಡ ಸ್ವಾತಂತ್ರ್ಯವಿರುವುದಿಲ್ಲ, ಈ ಜೀತ ಪದ್ಧತಿಗೆ ಒಳಪಟ್ಟಿರುವಂತಹವರನ್ನು ಗುರುತಿಸುವಿಕೆ, ರಕ್ಷಣೆ, ಬಿಡುಗಡೆಗೊಳಿಸುವುದು ಹಾಗೂ ಅವರಿಗೆ ಪುನರ್ವಸತಿ ಕಲ್ಪಿಸುವಂತಹ ಕೆಲಸಗಳಾಗಬೇಕು ಎಂದು ಹೇಳಿದರು.

ರಾಜ್ಯದಲ್ಲಿ ಹೆಚ್ಚು ಜೀತ ಕಾರ್ಮಿಕರು ಪತ್ತೆಯಾಗಿರುವ ಪ್ರಕರಣಗಳ ಪೈಕಿ ಹಾಸನ ಜಿಲ್ಲೆಯು ಕೂಡ ಒಂದಾಗಿದೆ ಇದನ್ನ ನಿರ್ಮೂಲನೆ ಮಾಡಲು ಎಲ್ಲಾ ಇಲಾಖೆಯ ಅಧಿಕಾರಿಗಳ ಮೇಲೆ ಗುರುತರವಾದ ಜವಾಬ್ದಾರಿ ಇದೆ, ಪ್ರಕರಣಗಳ ಗುರುತಿಸಿ ಬೆಳಕಿಗೆ ತರುವುದು ನಮ್ಮ ನಿಮ್ಮೆಲ್ಲರ ಕರ್ತವ್ಯವಾಗಿದೆ ಈ ನಿಟ್ಟಿನಲ್ಲಿ ಕಟಿಬದ್ಧರಾಗಿ ಸಮನ್ವಯತೆಯಿಂದ ಉತ್ತಮ ಕೆಲಸ ಮಾಡಲು ಅಧಿಕಾರಿಗಳು ಮುಂದಾಗುವಂತೆ ತಿಳಿಸಿದರು.

ಜೀತ ಪದ್ಧತಿ ವ್ಯವಸ್ಥೆ ಶಿಕ್ಷಾ ಶಿಕ್ಷಾರ್ಹ ಅಪರಾಧವೆಂದು ಸಾರ್ವಜನಿಕರಿಗೆ ಕಾರ್ಯಕ್ರಮಗಳ ಮೂಲಕ ಅರಿವು ಮೂಡಿಸಬೇಕು, ಹಾಗೂ ಎಲ್ಲಾ ಕಚೇರಿಗಳಲ್ಲಿಯೂ ಜೀತ ಪದ್ಧತಿ ನಿರ್ಮೂಲನೆಯ ಕುರಿತು ಫಲಕಗಳನ್ನು ಅಳವಡಿಸಬೇಕು ಎಂದರಲ್ಲದೆ ಇದನ್ನು ನಿರ್ಮೂಲನೆ ಮಾಡಲು ಇಲಾಖೆಗಳು ಮಾಡಬೇಕಾದ ಕರ್ತವ್ಯಗಳ ಕುರಿತು ವಿವರಿಸಿದರು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ವೆಂಕಟೇಶ್ ನಾಯ್ಡು ಮಾತನಾಡಿ, ಜೀತ ಪದ್ಧತಿಯನ್ನು ನಿರ್ಮೂಲನೆ ಮಾಡುವ ಜವಾಬ್ದಾರಿ ಸಮಾಜದಲ್ಲಿರುವ ಪ್ರತಿಯೊಬ್ಬರದ್ದಾಗಿದೆ, ಮನುಷ್ಯರಿಗೆ ಮನುಷ್ಯರುಗಳೇ ಬೆಲೆ ಕೊಡಬೇಕು, ಜೀತ ಪದ್ಧತಿ ಮಾಡುತ್ತಿರುವ ಕಾರ್ಮಿಕರ ಕುರಿತು ನಿಮ್ಮ ಗಮನಕ್ಕೆ ಬಂದರೆ ಅಂತಹ ಪ್ರಕರಣಗಳ ಕುರಿತು ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿಯನ್ನು ನೀಡಿ ಆ ಕೆಲಸವನ್ನು ಕಾರ್ಯರೂಪಕ್ಕೆ ತನ್ನಿ ಎಂದು ಹೇಳಿದರು.

ವಕೀಲ ಬಿ. ಚಂದ್ರಶೇಖರ್ ಮಾತನಾಡಿ, ಮನುಷ್ಯ ಸಂಘ ಜೀವಿ ಹಾಗೆಯೇ ಅವನಲ್ಲಿ ಒಳ್ಳೆಯ ಕೆಟ್ಟ ಚಟಗಳನ್ನು ಅಭ್ಯಾಸ ಮಾಡಿಕೊಂಡೆ ಬಂದಿರುತ್ತಾನೆ. ಮನುಷ್ಯನಿಗೆ ಬದುಕಲು ಗಾಳಿ, ಬೆಳಕು, ನೀರಿಗಿಂತಲೂ ಕಾನೂನು ಅತ್ಯವಶ್ಯಕ. ಜೀತ ಪದ್ಧತಿಯು ಒಂದು ಸಾಮಾಜಿಕ ಪಿಡುಗಾಗಿದೆ. ಈ ಅನಿಷ್ಟ ಪದ್ಧತಿಯನ್ನು ಹೋಗಲಾಡಿಸಲು ಸಂವಿಧಾನ 23ನೇ ವಿಧಿಯಲ್ಲಿ ಬಲವಂತವಾಗಿ ದುಡಿಸಿಕೊಳ್ಳುವುದು ನಿಷೇಧ ಎಂದು ಮೂಲಭೂತ ಹಕ್ಕನ್ನು ಕೊಟ್ಟಿದೆ ಹಾಗೂ ಸಮಾನ ಕೆಲಸಕ್ಕೆ ಸಮಾನ ವೇತನ ಎಂಬುದಾಗಿ ತಿಳಿಸಿದೆ.

ಈ ಕಾನೂನನ್ನು ಜಾರಿಗೊಳಿಸಿದ ನಂತರ ಸಮಾಜದಲ್ಲಿ ಅನೇಕ ಬದಲಾವಣೆಗಳಾಗಿವೆ, ಈ ಪದ್ಧತಿಯನ್ನು ನಿರ್ಮೂಲನೆ ಮಾಡಲು ಸ್ಥೈರ್ಯ,ಧೈರ್ಯವಿರಬೇಕು, ಕಾನೂನಿನ ನಿಯಮಗಳನ್ನು ಹೃದಯದಿಂದ ಪ್ರೀತಿಸಿ ಜಾರಿಗೊಳಿಸಬೇಕು. ಉದ್ದೇಶಪೂರ್ವಕವಾಗಿ ನಾವು ಮಾಡುವ ನಿರ್ಲಕ್ಷ್ಯ ಅಕ್ಷಮ್ಯವಾಗಿದೆ, ಹೃದಯದಿಂದ ಕೆಲಸ ಮಾಡಿ ಉತ್ತಮ ಫಲಿತಾಂಶ ಪಡೆಯೋಣ ಶೂನ್ಯ ಜೀತ ಪದ್ಧತಿಯಾಗಿ ನಮ್ಮ ಜಿಲ್ಲೆಯನ್ನು ಮಾಡೋಣ ಎಂದರು.

ಬಡತನ, ಅನಕ್ಷರತೆ, ನಿರುದ್ಯೋಗ ಎಲ್ಲಾ ಪಿಡುಗುಗಳು ಸೇರಿ ವ್ಯಕ್ತಿಯನ್ನ ಜೀತ ಪದ್ಧತಿಗೆ ನೂಕಿವೆ. ಪೂರ್ವಿಕರು, ವಂಶಸ್ಥರು ಮಾಡಿದ ಸಾಲವನ್ನು ತೀರಿಸಲು ವೇತನ ರಹಿತವಾಗಿ ಕೆಲಸ ಮಾಡುತ್ತಿರುತ್ತಾರೆ, ಅಂಥವರನ್ನು ಗುರುತಿಸಿ ವರದಿ ಮಾಡಿಕೊಂಡು ಅವರನ್ನು ರಕ್ಷಣೆ ಮಾಡಬೇಕು, ಈ ಪದ್ಧತಿಯ ನಿರ್ಮೂಲನೆಗೆ ಸಮನ್ವಯತೆ ಅತ್ಯಗತ್ಯವಾಗಿದೆ ಎಂದು ಜೀತ ಪದ್ಧತಿ ನಿರ್ಮೂಲನೆಯ ಕುರಿತು ಸವಿವರವಾಗಿ ಉಪನ್ಯಾಸ ನೀಡಿದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಡಿ.ಟಿ. ಪ್ರಸನ್ನ ಮಾತನಾಡಿ, ಜೀತ ಪದ್ಧತಿಯನ್ನು ಜಿಲ್ಲೆಯಲ್ಲಿ ಬುಡಸಮೇತ ಕಿತ್ತು ಹಾಕುವ ನಿಟ್ಟಿನಲ್ಲಿ ಎಲ್ಲರೂ ಪ್ರಾಮಾಣಿಕವಾಗಿ ಪ್ರಯತ್ನಿಸೋಣ ಎಂದರು.

ಬೇಲೂರಿನ ತಹಶೀಲ್ದಾರ್ ಮಮತಾ ಮಾತನಾಡಿ, ಸಕಲೇಶಪುರ ತಾಲ್ಲೂಕಿನ ಹಾನುಬಾಳ್‌ನ ರಾಮೇಶ್ವರ ಎಸ್ಟೇಟ್‌ನಲ್ಲಿ ಜೀತ ಪದ್ಧತಿಗೆ ಒಳಪಟ್ಟಿದ್ದವರನ್ನು ರಕ್ಷಣೆ ಮಾಡಲು ಹೋದಂತಹ ಸಂದರ್ಭದಲ್ಲಿ ಆದ ಅನುಭವವನ್ನು ವಿವರಿಸಿದರು. ಸಂವಿಧಾನದಡಿ ಪ್ರತಿಯೊಬ್ಬರೂ ಸಮಾನತೆಯಿಂದ ಬದುಕಲು ಅವಕಾಶವಿದೆ, ಅಧಿಕಾರಿಗಳು ನಿರ್ಲಕ್ಷ್ಯ ಮಾಡದೆ, ಸಮಯ ಮತ್ತು ಕರ್ತವ್ಯ ಪ್ರಜ್ಞೆಯಿಂದ ಕೆಲಸ ಮಾಡುವ ಮೂಲಕ ನಾಗರೀಕರ ಉಜ್ವಲ ಭವಿಷ್ಯ ರೂಪಿಸಲು ಪ್ರಯತ್ನಿಸೋಣ ಎಂದರು.

ಜಿಲ್ಲಾಧಿಕಾರಿ ಜೀತ ಪದ್ಧತಿ ನಿರ್ಮೂಲನೆಯ ಕುರಿತ ಪ್ರತಿಜ್ಞಾ ವಿಧಿ ಬೋಧಿಸಿದರು. ಉಪ ವಿಭಾಗಾಧಿಕಾರಿ ಜೆ.ಬಿ. ಮಾರುತಿ ಹಾಗೂ ತಹಶೀಲ್ದಾರ್ ಮಮತಾ ಅವರನ್ನು ಅಭಿನಂದಿಸಲಾಯಿತು. ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಕೃಷ್ಣಮೂರ್ತಿ, ಯೋಜನ ನಿರ್ದೇಶಕ ಚಂದ್ರಮೌಳಿ, ಸಕಲೇಶಪುರದ ಉಪ ವಿಭಾಗಾಧಿಕಾರಿ ಶೃತಿ ಇತರರಿದ್ದರು.

# ತಾಯಿ-ಮಗ ಆತ್ಮಹತ್ಯೆಗೆ ಸೊಸೆ ಕಿರುಕುಳ ಕಾರಣವಲ್ಲ

## ಭರತ್‌ಗೆ ಮಾರಣಾಂತಿಕ ಕಾಯಿಲೆ ಇತ್ತು । ಪತ್ನಿ ಸಂಬಂಧಿಕರ ಆರೋಪ

ಚನ್ನರಾಯಪಟ್ಟಣ: ತಾಯಿ-ಮಗ ಕಟ್ಟೆಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದ ಪ್ರಕರಣಕ್ಕೆ ಮಹತ್ವದ ತಿರುವು ಸಿಕ್ಕಿದ್ದು ಸಾವಿಗೆ ಸೊಸೆಯ ಕಿರುಕುಳ ಕಾರಣವಲ್ಲ, ಮಗನ ಮಾರಣಾಂತಿಕ ಕಾಯಿಲೆಯ ವಿಷಯ ಬಹಿರಂಗಗೊಳ್ಳುತ್ತದೆ ಎಂದು ಮರ್ಯಾದೆಗೆ ಹೆದರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ.

ತಾಲ್ಲೂಕಿನ ಕಬ್ಬಳಿ ಗ್ರಾಮದಲ್ಲಿ ನೀರಿನ ಕಟ್ಟೆಗೆ ಬಿದ್ದು ಸೋಮವಾರ ಜಯಂತಿ (60), ಭರತ್ (35) ಆತ್ಮಹತ್ಯೆಗೆ ಶರಣಾಗಿದ್ದರು. ಈ ಸಾವಿಗೆ ಗಂಡ-ಹೆಂಡತಿ ನಡುವೆ ಹೊಂದಾಣಿಕೆ ಇಲ್ಲದಿರುವುದು, ಅತ್ತೆ-ಸೊಸೆ ನಡುವೆ ಜಗಳವೇ ಕಾರಣವೆಂದು ಹೇಳಲಾಗುತ್ತಿತ್ತು.

ಆದರೆ, ಹುಡುಗನಿಗೆ ಗಂಭೀರ ಕಾಯಿಲೆ ಇರುವ ಬಗ್ಗೆ ಹುಡುಗಿಯ ಮನೆಯವರಿಗೆ ಗೊತ್ತಾಗಿದ್ದರಿಂದ ಈ ಬಗ್ಗೆ ಸೋಮವಾರ ಪರೀಕ್ಷೆ ಮಾಡಿಸಲೆಂದು ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಪರೀಕ್ಷೆ ಮಾಡಿಸಿದರೆ ವಿಷಯ ಬಹಿರಂಗಗೊಳ್ಳುತ್ತದೆ ಇದರಿಂದ ತಮ್ಮ ಮರ್ಯಾದೆ ಹೋಗುತ್ತದೆ ಎಂದು ಭರತ್ ಈ ವಿಷಯವನ್ನು ತಾಯಿಯೊಂದಿಗೆ ಹಂಚಿಕೊಂಡಿದ್ದ. ಅದರಿಂದ ಆಘಾತಕ್ಕೊಳಗಾದ ಜಯಂತಿ ಅವರು ಮರ್ಯಾದೆಗೆ ಹೆದರಿ ಇಬ್ಬರೂ ಸೋಮವಾರ ಬೆಳಗ್ಗಿನ ಜಾವ ಕಟ್ಟೆಗೆ ಬಿದ್ದು ಆತ್ಮಹತ್ಯೆಗೆ ಶರಣಾಗಿದ್ದಾರೆ.



ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡಿದ್ದ ಭರತ್‌ಗೆ ಕಳೆದ 8 ತಿಂಗಳ ಹಿಂದೆ ಮದುವೆಯಾಗಿತ್ತು. ಆರಂಭದಿಂದಲೂ ಗಂಡ-ಹೆಂಡತಿ ನಡುವೆ ಹೊಂದಾಣಿಕೆ ಇರಲಿಲ್ಲ. ಭರತ್ ಪತ್ನಿಯಿಂದ ದೂರವಿರುತ್ತಿದ್ದ. ಯಾವ ವಿಷಯವನ್ನು ಮುಕ್ತವಾಗಿ ಹಂಚಿಕೊಳ್ಳುತ್ತಿರಲಿಲ್ಲ. ಈ ಬಗ್ಗೆ ಯುವತಿ ತನ್ನ ತವರು ಮನೆಯವರಿಗೆ ತಿಳಿಸಿದ್ದಳು. ಅದಕ್ಕೆ ಭರತ್, ತನ್ನ ಪತ್ನಿ ಹೆಣ್ಣೇ ಅಲ್ಲವೆಂದು ಆರೋಪ ಮಾಡಿದ್ದ. ಈ ನಡುವೆ ಕಳೆದ ಫೆ.22 ರಾಜಿ ಪಂಚಾಯಿತಿ ಮಾಡಿ ಪತ್ನಿಯನ್ನು ಗಂಡನ ಮನೆಗೆ ಕಳುಹಿಸಲಾಗಿತ್ತು ಎಂದು ಭರತ್ ಪತ್ನಿಯ ತವರು ಮನೆಯವರು ಆರೋಪಿಸಿದ್ದಾರೆ.

ಈ ವೇಳೆ ಭರತ್‌ನ ಪತ್ನಿ ಆತ ಸೇವನೆ ಮಾಡುತ್ತಿದ್ದ ಮಾತ್ರೆ-ಔಷಧಗಳನ್ನು ಫೋಟೋ ತೆಗೆದು ತನ್ನ ಅಕ್ಕನಿಗೆ ಕಳುಹಿಸಿದ್ದಾಳೆ. ಆಕೆ ತನ್ನ ಸ್ನೇಹಿತೆಯಾದ ನರ್ಸ್‌ಗೆ ಕಳುಹಿಸಿದಾಗ ಈ ಔಷಧವನ್ನು ರೋಗಿಗಳು ಮಾತ್ರ ಸೇವನೆ ಮಾಡುತ್ತಾರೆ ಎಂದು ತಿಳಿಸಿದ್ದಾರೆ. ಇದರಿಂದ ಅನುಮಾನಗೊಂಡ ಯುವತಿಯ ಮನೆಯವರು ಭರತ್‌ನ ಆಧಾರ್ ಕಾರ್ಡ್ ಅನ್ನು ಆರೋಗ್ಯ ಇಲಾಖೆಯಲ್ಲಿ ಪರಿಶೀಲಿಸಿದರೆ ವಿಷಯ ತಿಳಿಯುತ್ತದೆ ಎಂದು ಆಧಾರ್ ಕಾರ್ಡ್ ಕೇಳಿದ್ದಾರೆ. ಅದನ್ನು ಕೊಡಲು ನಿರಾಕರಿಸಿದ್ದಾನೆ.

ಈ ಬಗ್ಗೆ ಮಾ.8ರಂದು ಎರಡು ಕಡೆಯವರು ಮಾತುಕತೆ ನಡೆಸಿ, ನಿಮ್ಮ ಹುಡುಗನಿಗೆ ಗಂಭೀರ ಕಾಯಿಲೆ ಇರುವ ಅನುಮಾನವಿದೆ. ಹುಡುಗ ಆರೋಪ ಮಾಡುತ್ತಿರುವಂತೆ ನಮ್ಮ ಹುಡುಗಿ ಹೆಣ್ಣು ಹೌದೋ ಅಲ್ಲವೋ ಎಂಬ ಬಗ್ಗೆ ಸೋಮವಾರ ವೈದ್ಯಕೀಯ ತಪಾಸಣೆ ನಡೆಸೋಣ, ಆಧಾರ್ ಕಾರ್ಡ್‌ನೊಂದಿಗೆ ಬರುವಂತೆ ಹೇಳಿ ಕಳುಹಿಸಿದ್ದರು.

ಈ ವೇಳೆ ಭರತ್ ತನಗಿರುವ ಸಮಸ್ಯೆ ಬಗ್ಗೆ ತಾಯಿಯೊಂದಿಗೆ ಹೇಳಿಕೊಂಡಿದ್ದಾನೆ. ಅದರಿಂದ ಜಯಂತಿ ಅವರು ಆಘಾತಗೊಂಡಿದ್ದಾರೆ. ಸೋಮವಾರ ಪರೀಕ್ಷೆ ನಡೆಸಿದರೆ ವಿಷಯ ಬಹಿರಂಗಗೊಂಡು ಮರ್ಯಾದೆ ಬೀದಿ ಪಾಲಾಗುತ್ತದೆ ಎಂದು ಭಾವಿಸಿ ತಾಯಿ-ಮಗ ಆತ್ಮಹತ್ಯೆಗೆ ಶರಣಾಗಿದ್ದಾರೆ.

# ಪಡಿತರದಾರರಿಗೆ ಈ ತಿಂಗಳು 15 ಕೆ.ಜಿ. ಅಕ್ಕಿ

**ಡಿಬಿಟಿ ಮೂಲಕ ಹಣ ವರ್ಗಾವಣೆ ಸ್ಥಗಿತವಾಗ್ದಾನದಂತೆ 10 ಕೆ.ಜಿ. ಅಕ್ಕಿ ವಿತರಣೆ**




ಹಾಸನ: ರಾಜ್ಯ ಸರ್ಕಾರ ಚುನಾವಣೆ ಪೂರ್ವದಲ್ಲಿ ಘೋಷಿಸಿದ್ದ ಅನ್ನಭಾಗ್ಯ ಯೋಜನೆಯಡಿ 10 ಕೆ.ಜಿ. ಅಕ್ಕಿ ವಿತರಣೆಗೆ ಕಾಲ ಸನ್ನಿಹಿತವಾಗಿದ್ದು ಜಿಲ್ಲೆಗೆ ಪ್ರತಿ ತಿಂಗಳು ಹೆಚ್ಚುವರಿ 1.40 ಲಕ್ಷ ಕ್ವಿಂಟಾಲ್ ಅಕ್ಕಿ ದೊರೆಯಲಿದೆ. ಜೊತೆಗೆ ಮಾರ್ಚ್ ತಿಂಗಳಲ್ಲಿ ಪಡಿತರದಾರರಿಗೆ 15 ಕೆ.ಜಿ. ಅಕ್ಕಿ ನೀಡಲಾಗುತ್ತಿದೆ.

2023ರ ವಿಧಾನಸಭೆ ಚುನಾವಣೆ ವೇಳೆ ಪಂಚ ಗ್ಯಾರಂಟಿಗಳನ್ನು ಘೋಷಿಸಿದ್ದ ಕಾಂಗ್ರೆಸ್ ಪಡಿತರದಾರರಿಗೆ 10 ಕೆ.ಜಿ. ಅಕ್ಕಿ ಕೊಡುವುದು ಸೇರಿತ್ತು. ಚುನಾವಣೆಯಲ್ಲಿ ಕಾಂಗ್ರೆಸ್ ಅಭೂತಪೂರ್ವ ಗೆಲುವು ಸಾಧಿಸಿತ್ತಾದರೂ ಅಗತ್ಯಕ್ಕೆ ತಕ್ಕಷ್ಟು ಅಕ್ಕಿ ಸಿಗದ ಹಿನ್ನೆಲೆಯಲ್ಲಿ 5 ಕೆ.ಜಿ. ಅಕ್ಕಿ ಬದಲಿಗೆ ಪ್ರತಿ ಕೆ.ಜಿ.ಗೆ 34 ರೂ. ನಂತೆ 170 ರೂ. ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುತ್ತಿತ್ತು. ಇತ್ತೀಚೆಗೆ ಕೇಂದ್ರ ಸರ್ಕಾರ ಹೆಚ್ಚುವರಿ ಅಕ್ಕಿ ಕೊಡಲು ಹಸಿರು ನಿಶಾನೆ ತೋರಿರುವುದರಿಂದ ಫೆಬ್ರವರಿ ತಿಂಗಳಿಂದ ಡಿಬಿಟಿ ಮೂಲಕ ಹಣ ಜಮೆ ಮಾಡುವುದನ್ನು ನಿಲ್ಲಿಸಲಾಗಿದೆ. ಇನ್ನು ಮುಂದೆ ಫಲಾನುಭವಿಗಳಿಗೆ ವಾಗ್ದಾನದಂತೆ 10 ಕೆ.ಜಿ. ಅಕ್ಕಿ ಲಭ್ಯವಾಗಲಿದೆ.

**4.53 ಲಕ್ಷ ಬಿಪಿಎಲ್ ಕಾರ್ಡ್:** ಜಿಲ್ಲೆಯಲ್ಲಿ 4.53 ಲಕ್ಷ ಬಿಪಿಎಲ್ ಕಾರ್ಡ್‌ದಾರರಿದ್ದಾರೆ. ಪ್ರತಿ 5 ಕೆ.ಜಿ.ಗೆ 170 ರೂ.ನಂತೆ ತಿಂಗಳಿಗೆ 22 ಕೋಟಿ ರೂ.ಗಳನ್ನು ಡೆಬಿಟ್ ಮಾಡಲಾಗಿದೆ. ಫೆಬ್ರವರಿ ತಿಂಗಳಿಂದ ಹಣದ ಬದಲಿಗೆ ಅಕ್ಕಿಯನ್ನೇ ಕೊಡಲು ಸರ್ಕಾರ ನಿರ್ಧರಿಸಿರುವ ಹಿನ್ನೆಲೆಯಲ್ಲಿ ಫೆಬ್ರವರಿ ತಿಂಗಳ 5 ಕೆ.ಜಿ. ಹಾಗೂ ಮಾರ್ಚ್‌ನ 10 ಕೆ.ಜಿ. ಸೇರಿ 15 ಕೆ.ಜಿ. ಅಕ್ಕಿಯನ್ನು ನ್ಯಾಯಬೆಲೆ ಅಂಗಡಿಗಳಲ್ಲಿ ವಿತರಣೆ ಮಾಡಲಾಗುತ್ತಿದೆ. ಏಪ್ರಿಲ್‌ನಿಂದ ಅದು ನಿಗದಿಯಂತೆ 10 ಕೆ.ಜಿ.ಗೆ ಇಳಿಕೆಯಾಗಲಿದೆ.

**ಹೆಚ್ಚುವರಿ 1.40 ಲಕ್ಷ ಕ್ವಿಂಟಾಲ್:** ಪ್ರಸ್ತುತ 4.53 ಬಿಪಿಎಲ್, ಅಂತ್ಯೋದಯ ಫಲಾನುಭವಿಗಳಿಗೆ 70 ಸಾವಿರ ಕ್ವಿಂಟಾಲ್ ಅಕ್ಕಿ ವಿತರಣೆಯಾಗುತ್ತಿತ್ತು. ಈಗ ಹೆಚ್ಚುವರಿ 5 ಕೆ.ಜಿ. ನೀಡಬೇಕಿರುವುದರಿಂದ ಅದು 2 ಲಕ್ಷ ಕ್ವಿಂಟಾಲ್‌ಗೆ ಏರಿಕೆಯಾಗಲಿದೆ. ಜಿಲ್ಲೆಯಲ್ಲಿ 880 ನ್ಯಾಯಬೆಲೆ ಅಂಗಡಿಗಳಿವೆ. ಮಾರ್ಚ್ ತಿಂಗಳಲ್ಲಿ ಪ್ರತಿ ಫಲಾನುಭವಿಗೆ 15 ಕೆ.ಜಿ. ಅಕ್ಕಿ ನೀಡಬೇಕೆಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಜಂಟಿ ನಿರ್ದೇಶಕ ಅರುಣ್ ಕುಮಾರ್ ಸಂಗಾವಿ ಅವರು ಸೂಚಿಸಿದ್ದಾರೆ.

**ಕೇಂದ್ರ-ರಾಜ್ಯ ಸರ್ಕಾರ ಜಟಾಪಟಿ:** ಅನ್ನಭಾಗ್ಯ ಯೋಜನೆಯಡಿ 10 ಕೆ.ಜಿ. ಅಕ್ಕಿ ವಿತರಣೆ ವಿಚಾರ ಕೇಂದ್ರ ಹಾಗು ರಾಜ್ಯ ಸರ್ಕಾರದ ನಡುವೆ ಜಟಾಪಟಿಗೆ ಕಾರಣವಾಗಿತ್ತು. ಕೇಂದ್ರ ಸರ್ಕಾರ ಗ್ಯಾರಂಟಿ ಯೋಜನೆಗೆ ಅಡ್ಡಿಯಾಗುತ್ತಿದೆ ಎಂದು ಕಾಂಗ್ರೆಸ್ ವಾಗ್ದಾಳಿ ನಡೆಸಿತ್ತು. ಈಗ ಕೇಂದ್ರವೇ ಹೆಚ್ಚುವರಿ ಅಕ್ಕಿ ಕೊಡಲು ಮುಂದಾಗಿರುವುದು ಸಾರ್ವಜನಿಕರಲ್ಲಿ ನೆಮ್ಮದಿ ತಂದಿದೆ.

**ತೆರೆಯದ ನ್ಯಾಯಬೆಲೆ ಅಂಗಡಿ:** ಬಡತನ ನಿರ್ಮೂಲನೆ ಹಾಗು ಹಸಿವು ಮುಕ್ತ ಕರ್ನಾಟಕ ನಿರ್ಮಾಣಕ್ಕಾಗಿ ಸರ್ಕಾರ ಅನ್ನಭಾಗ್ಯ ಯೋಜನೆ ಜಾರಿಗೊಳಿಸಿದೆ. ಆದರೆ ತಳಮಟ್ಟದಲ್ಲಿ ಫಲಾನುಭವಿಗಳಿಗೆ ತಲುಪುವಲ್ಲಿ ವಿಳಂಬವಾಗುತ್ತಿದೆ ಎಂಬ ಆರೋಪಗಳು ಕೇಳಿಬಂದಿವೆ. ಮುಖ್ಯವಾಗಿ ಆಲೂರು ತಾಲ್ಲೂಕಿನ ನ್ಯಾಯಬೆಲೆ ಅಂಗಡಿಗಳು ಬಾಗಿಲು ತೆರೆಯುವುದಿಲ್ಲ. ಪಡಿತರದಾರರು ದಿನಗಟ್ಟಲೇ ಕಾದು ಕುಳಿತರು ಯಾರೂ ಬರುವುದಿಲ್ಲ. ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿದರೂ ಯಾವ ಪ್ರಯೋಜನವಾಗುತ್ತಿಲ್ಲ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಚನ್ನರಾಯಪಟ್ಟಣ: ತಾಲ್ಲೂಕಿನ ಸಂತೇಶಿವರ ಗ್ರಾಮದಲ್ಲಿ ಸಾಹಿತಿ ಎಸ್.ಎಲ್. ಭೈರಪ್ಪ ಅವರಿಗೆ ಇತ್ತೀಚೆಗೆ ಹಮ್ಮಿಕೊಂಡಿದ್ದ ಕೃತಜ್ಞತಾರ್ಪಣಾ ಸಮಾರಂಭದಲ್ಲಿ ಗ್ರಾಮದ ಕೆಇಬಿ ನಿವೃತ್ತ ಅಧಿಕಾರಿ ಎಸ್.ಎಲ್. ಭೈರಪ್ಪ ಅವರು ಮಾಲಾರ್ಪಣೆ ಮಾಡಿ ಸ್ವಾಗತಿಸಿದರು. ಶಾಸಕ ಸಿ.ಎನ್. ಬಾಲಕೃಷ್ಣ, ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ. ಗೋಪಾಲಸ್ವಾಮಿ, ಎಸ್.ಎಲ್. ಮಂಜುನಾಥ್, ಎಸ್.ಎಂ. ಚೇತನ್ ಇತರರಿದ್ದರು.

# ಗ್ರಾ.ಪಂ.ನ ಟ್ರ್ಯಾಕ್ಟರ್ ಕಳವು

ಅರಕಲಗೂಡು: ಕಸ ಸಂಗ್ರಹಕ್ಕಾಗಿ ಗ್ರಾಮ ಪಂಚಾಯಿತಿ ನಿಲ್ಲಿಸಿದ್ದ ಸುಮಾರು 3 ಲಕ್ಷ ರೂ. ಮೌಲ್ಯದ ಟ್ರೇಲರ್ ಸಮೇತ ಟ್ರ್ಯಾಕ್ಟರ್ ಕಳವು ಮಾಡಿರುವ ಘಟನೆ ಕೊಣನೂರಿನಲ್ಲಿ ನಡೆದಿದೆ.

2018ರ ಶ್ರವಣಬೆಳಗೊಳ ಮಹಾಮಸ್ತಾಕಭಿಷೇಕ ನಂತರ ಜಿಲ್ಲಾ ಪಂಚಾಯಿತಿಯು ಗ್ರಾ.ಪಂ.ಗೆ ಟ್ರ್ಯಾಕ್ಟರ್ ಹಸ್ತಾಂತರ ಮಾಡಿತ್ತು. ಮಾ. 9ರಂದು ಗ್ರಾಮ ಪಂಚಾಯಿತಿ ಆವರಣದಲ್ಲಿ ನಿಲ್ಲಿಸಿದ್ದ ಟ್ರ್ಯಾಕ್ಟರ್ ಬೆಳಕಾಗುವಷ್ಟರಲ್ಲಿ ಕಳುವಾಗಿದೆ. ಕೊಣನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಜಾತ್ರೆಯಲ್ಲಿ ಚಿನ್ನದ ಸರ ಕಳವು

ಅರಸೀಕೆರೆ: ತಾಲ್ಲೂಕಿನ ಮನಕತ್ತೂರು ಗ್ರಾಮದ ಶ್ರೀ ಕಾಲಭೈರವೇಶ್ವರ ರಥೋತ್ಸವದ ನೂಕುನುಗ್ಗಲಿನಲ್ಲಿ ಇಬ್ಬರು ಮಹಿಳೆಯರ ಕೊರಳಿಂದ ಚಿನ್ನದ ಸರ ದೋಚಲಾಗಿದೆ.

ಚಿಕ್ಕಮಗಳೂರು ಜಿಲ್ಲೆ ನಾರಾಯಣಪುರ ಗ್ರಾಮದ ಮಂಜುಳಾ ಅವರು ಕಾಲಭೈರವೇಶ್ವರ ಸ್ವಾಮಿ ರಥೋತ್ಸವ ಮುಗಿಸಿ ಸಮೀಪದ ಬನಶಂಕರಿ ದೇವಸ್ಥಾನಕ್ಕೆ ಹೋಗುತ್ತಿದ್ದಾಗ ನೂಕುನುಗ್ಗಲಿನಲ್ಲಿ ಯಾರೋ ಕೊರಳಿಗೆ ಕೈ ಹಾಕಿ 50 ಗ್ರಾಂ ತೂಕದ ಚಿನ್ನದ ಮಾಂಗಲ್ಯ ಸರ ದೋಚಿದ್ದಾರೆ. ತಾಲ್ಲೂಕಿನ ದಿಗ್ಗೇನಹಳ್ಳಿ ಗ್ರಾಮದ ರಾಜಕುಮಾರಿ ಎಂಬುವರ ಕೊರಳಿನಿಂದ ಸರ ಎಗರಿಸಲಾಗಿದೆ.

ದೇವಸ್ಥಾನದ ಬಾಗಿಲಿನಲ್ಲಿ ಕಳ್ಳರು 34 ಗ್ರಾಂ ತೂಕದ ಚಿನ್ನದ ಮಾಂಗಲ್ಯ ಸರ ಕಳವು ಮಾಡಿದ್ದಾರೆ. ಬಾಣಾವರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# 10 ಕೆಜಿ ಗಾಂಜಾ ವಶ: ಇಬ್ಬರ ಬಂಧನ

ಕೊಣನೂರು: ಹೊರಗಡೆಯಿಂದ ಅಕ್ರಮವಾಗಿ ತಂದು ರಾಮನಾಥಪುರದ ಐಬಿ ವೃತ್ತದಲ್ಲಿ ಗಾಂಜಾ ಮಾರಾಟ ಮಾಡಲು ಯತ್ನಿಸುತ್ತಿದ್ದ ಇಬ್ಬರನ್ನು ಬಂಧಿಸಿರುವ ಸ್ಥಳೀಯ ಪೊಲೀಸರು, ಆರೋಪಿಗಳಿಂದ ಸುಮಾರು 10 ಕೆಜಿ ಗಾಂಜಾ ವಶಪಡಿಸಿಕೊಂಡಿದ್ದಾರೆ.

ಒರಿಸ್ಸಾ ಮೂಲದ ಸಮೀರ್ ಪ್ರಧಾನ್ (47), ಗೀತಾ ಪ್ರಧಾನ್ (25) ಬಂಧಿತ ಆರೋಪಿಗಳು.

# ಪತ್ರಿಕೋದ್ಯಮದಲ್ಲಿ ವ್ಯಂಗ್ಯ ಚಿತ್ರಕ್ಕೂ ಪ್ರಾಮುಖ್ಯ ಇದೆ

ಹಾಸನ: ಹಾಸ್ಯ ಪ್ರಜ್ಞೆ, ಕಲ್ಪನಾ ಶಕ್ತಿ, ಹೊಸತನ ಆಲೋಚಿಸುವ ಶಕ್ತಿ ಇರುವವರು ಅತ್ಯುತ್ತಮ ವ್ಯಂಗ್ಯಚಿತ್ರ ಕಾರರಾಗಬಹುದು ಎಂದು ಹಿರಿಯ ಪತ್ರಕರ್ತ ಹಾಗೂ ವ್ಯಂಗ್ಯಚಿತ್ರಕಾರ ಎಂ.ವಿ. ಶಿವರಾಂ ಹೇಳಿದರು. ನಗರದ ಆರ್.ಸಿ. ರಸ್ತೆಯ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಂಗಳವಾರ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದಿಂದ ಆಯೋಜಿಸಲಾಗಿದ್ದ ವ್ಯಂಗ್ಯಚಿತ್ರ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.




ಪತ್ರಿಕೋದ್ಯಮ ಕ್ಷೇತ್ರದಲ್ಲಿ ವ್ಯಂಗ್ಯಚಿತ್ರಗಳ ಪ್ರಾಮುಖ್ಯತೆ ಅತ್ಯಂತ ಹೆಚ್ಚಿದೆ. ನೂರಾರು ಪದಗಳಲ್ಲಿ ಹೇಳಲಾಗದ ಸನ್ನಿವೇಶವನ್ನು ಒಂದು ಕಿರು ಚಿತ್ರ ಬಿಡಿಸುವ ಮೂಲಕ ಧ್ವನಿಸಬಹುದು ಎಂದರು.

1740 ರಲ್ಲಿ ರೋಮ್ ರಾಜರ ಮೇಲೆ ಅವರ ಅತೃಪ್ತ ಆಡಳಿತವನ್ನು ಟೀಕಿಸುವ, ವಿರೋಧಿಸುವ ಸಲುವಾಗಿ ವ್ಯಂಗ್ಯಚಿತ್ರ ಆರಂಭವಾಯಿತು. ಕೊರವಂಜಿ ಎಂಬ ಪತ್ರಿಕೆ ವ್ಯಂಗ್ಯ ಚಿತ್ರಗಳನ್ನು ಮೊದಲಿಗೆ ಪ್ರಕಟಿಸುತ್ತಿದ್ದರು, ಅದರಲ್ಲೂ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ವ್ಯಂಗ್ಯ ಚಿತ್ರ ಬರೆಯುತ್ತಿದ್ದ ಆರ್.ಕೆ. ಲಕ್ಷ್ಮಣ್ ಅವರು ಹೆಸರಾಂತ ವ್ಯಂಗ್ಯಚಿತ್ರರಾಗಿ ಕೊನೆಯಲ್ಲಿ ಅದೇ ಪತ್ರಿಕೆಗೆ ಸಂಪಾದಕರಾದರು ಎಂದು ವಿವರಿಸಿದರು.

ಒಂದು ವ್ಯಂಗ್ಯ ಚಿತ್ರ ನೋಡಲು ಹಾಸ್ಯವಾಗಿ ಕಂಡರೂ ಅದರಲ್ಲಿ ಅಪಾರ ವಿಷಯ ಅಡಕವಾಗಿರುತ್ತವೆ. ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ವಿಡಂಬನೆ ಮಾಡುವ ವ್ಯಂಗ್ಯ ಚಿತ್ರಗಳು ಹೆಚ್ಚಾಗಿರುತ್ತವೆ.

ಅದರಲ್ಲೂ ರಾಜಕೀಯ ವ್ಯಕ್ತಿಗಳ ವಿಡಂಬನೆ ಮಾಡುವ ವೇಳೆ ಅತ್ಯಂತ ಜಾಗರೂಕರಾಗಿರಬೇಕು. ಒಮ್ಮೊಮ್ಮೆ ರಾಜಕೀಯ ವ್ಯಕ್ತಿಗಳ ಚಿತ್ರವನ್ನು ವ್ಯಂಗ್ಯವಾಗಿ ಚಿತ್ರಿಸಿದ ವೇಳೆ ಅವರ ಕೋಪಕ್ಕೆ ಗುರಿಯಾಗಬೇಕಾಗುತ್ತದೆ. ವ್ಯಂಗ್ಯಚಿತ್ರ ರಚನೆಯಲ್ಲಿ ತಂತ್ರ ಹಾಗೂ ಕುತಂತ್ರ ಎರಡೂ ಪ್ರಮುಖವಾದವು, ವಿಷಯ, ಮುಖಭಾವ, ಸ್ಥಳ ಎಲ್ಲವೂ ವ್ಯಂಗ್ಯಚಿತ್ರದ ರಚನೆಯಲ್ಲಿ ಬಹುಮುಖ್ಯ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಡಿ.ಕೆ. ಮಂಜಯ್ಯ ಮಾತನಾಡಿ, ಪತ್ರಿಕೋದ್ಯಮ ಇಂದು ಬಹು ದೊಡ್ಡ ಕ್ಷೇತ್ರವಾಗಿ ಬೆಳೆದಿದ್ದು, ಈ ಕ್ಷೇತ್ರದಲ್ಲಿ ಕೆಲಸ ಮಾಡುವ ಯುವ ಸಮೂಹ ಕಾರ್ಯಕ್ಷಮತೆ, ಪ್ರಾಮಾಣಿಕತೆ, ನಿಷ್ಪಕ್ಷಪಾತ ಧೋರಣೆ ಮೈಗೂಡಿಸಿಕೊಳ್ಳಬೇಕು. ಮಾಧ್ಯಮ ಕ್ಷೇತ್ರದಲ್ಲಿ ಬರವಣಿಗೆಗೆ ಇರುವಷ್ಟೇ ಮೌಲ್ಯ ವ್ಯಂಗ್ಯಚಿತ್ರಕ್ಕೂ ಇದೆ. ಹಾಗಾಗಿ ವ್ಯಂಗ್ಯ ಚಿತ್ರಗಳು ನೋಡುಗರ, ಓದುಗರ ಮನಸೆಳೆಯುವಲ್ಲಿ ಪ್ರಮುಖ ಪಾತ್ರವಹಿಸುವುದರಿಂದ ಮಾಧ್ಯಮ ಕ್ಷೇತ್ರಕ್ಕೆ ಇದು ಹೆಚ್ಚು ಪ್ರಾಮುಖ್ಯತೆ ಪಡೆದುಕೊಂಡಿದೆ ಎಂದರು.

ವ್ಯಂಗ್ಯ ಚಿತ್ರ ಬರೆಯುವುದು ಎಷ್ಟು ಮುಖ್ಯವೋ, ಅದಕ್ಕೆ ಪಂಚಿಂಗ್ ಲೈನ್ ನೀಡುವುದು ಅಷ್ಟೇ ಮುಖ್ಯ. ಯುವ ಪತ್ರಕರ್ತರು ಈ ಕಲೆ ಮೈಗೂಡಿಸಿಕೊಳ್ಳಿ ಎಂದು ಸಲಹೆ ನೀಡಿದರು.

ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಡಾ.ಸಿ.ಎಲ್. ಶಿವಕುಮಾರ್, ಐ.ಕ್ಯೂ.ಎ.ಸಿ. ಸಂಚಾಲಕ ಜಿ.ಆರ್. ಮೋಹನ್ ಕುಮಾರ್, ನಗರದ ಎಂ.ಜಿ. ರಸ್ತೆ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಮನೋಹರ್, ಉಪನ್ಯಾಸಕ ರವಿ ಕುಮಾರ್ ಪಿ., ಉಪನ್ಯಾಸಕರಾದ ದಿಲೀಪ್ ಕುಮಾರ್ ಎಚ್.ಕೆ ಮತ್ತು ಕಾವ್ಯ ಸಿ.ಪಿ ಇದ್ದರು.

# ಗ್ರಾಮೀಣ ಸರ್ಕಾರಿ ಶಾಲೆಗಳ ಉಳಿವಿಗೆ ಸಹಕರಿಸಿ



ಅರಕಲಗೂಡು: ಗ್ರಾಮೀಣ ಮಕ್ಕಳ ಶೈಕ್ಷಣಿಕ ಬೆಳವಣಿಗೆಗೆ ಗ್ರಾಮಸ್ಥರು ಹಾಗೂ ಹಳೆಯ ವಿದ್ಯಾರ್ಥಿಗಳು ಕೈಜೋಡಿಸುವ ಮೂಲಕ ಸರ್ಕಾರಿ ಶಾಲೆಗಳನ್ನು ಉಳಿಸಲು ಸಹಕಾರ ನೀಡಬೇಕು ಎಂದು ಶಾಸಕ ಎ. ಮಂಜು ತಿಳಿಸಿದರು.

ತಾಲ್ಲೂಕಿನ ಮದಲಾಪುರ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ವಜ್ರ ಮಹೋತ್ಸವ ಮತ್ತು ಗುರುವಂದನಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಆ ಕಾಲದಲ್ಲಿ ಇಲ್ಲಿ ಶಾಲೆ ಆರಂಭಿಸಿದ ಪುಣ್ಯಾತ್ಮರ ಕಾಯಕದಿಂದಾಗಿ ಸಾವಿರಾರು ವಿದ್ಯಾರ್ಥಿಗಳು ಶಿಕ್ಷಣ ಗಳಿಸಿ ಇಂದು ಬೆಂಗಳೂರು ಸೇರಿದಂತೆ ಅನೇಕ ನಗರಗಳಲ್ಲಿ ಉನ್ನತ ಸ್ಥಾನದಲ್ಲಿದ್ದಾರೆ. ಈಗ ನಾವು ಶಾಲೆ ಆರಂಭಿಸಿದರೆ ಹಳ್ಳಿಗಳಲ್ಲಿ ಮಕ್ಕಳೇ ಬಾರದ ಸ್ಥಿತಿ ಇದೆ. ಶಾಲೆಯಲ್ಲಿ ಕಲಿತ ನಾವು ನೀವು ಇರಲ್ಲ, ಆದರೆ ನಾವು ಕಲಿತ ಶಾಲೆ ಶಾಶ್ವತವಾಗಿರುತ್ತದೆ. ಇದಕ್ಕಾಗಿ ಅವಕಾಶ ಸಿಕ್ಕಾಗ ನಾವು ಕಲಿತ ಶಾಲೆಯ ಉನ್ನತಿಗೆ ಶ್ರಮಿಸಬೇಕು. ವಜ್ರ ಮಹೋತ್ಸವ ಸ್ಮರಣಾರ್ಥ ಹಳೆಯ ವಿದ್ಯಾರ್ಥಿಗಳು ಕೊಡುಗೆ ನೀಡಬೇಕು, ನನ್ನ ಶಾಸಕರ ನಿಧಿಯಿಂದ ಶಾಲೆಗೆ ಸಹಾಯ ಮಾಡುವುದಾಗಿ ಭರವಸೆ ನೀಡಿದರು.

ಪ್ರತಿ ಹಳ್ಳಿಗಳಲ್ಲಿ ಮಕ್ಕಳು ದುಬಾರಿ ಶುಲ್ಕ ತೆತ್ತು ಪಟ್ಟಣ ಪ್ರದೇಶದ ಖಾಸಗಿ ಕಾನ್ವೆಂಟ್ ಗಳಿಗೆ ತೆರಳುತ್ತಿದ್ದಾರೆ. ಇದನ್ನು ತಪ್ಪಿಸುವ ಸಲುವಾಗಿ ನಾನು ನನ್ನ ಪತ್ನಿ ತಾಲ್ಲೂಕಿನಲ್ಲಿ 13 ಮಕ್ಕಳ ಮನೆ ತೆರೆದು ಕಾನ್ವೆಂಟ್‌ಗಳಿಗಿಂತ ಮಿಗಿಲಾದ ಸೌಲಭ್ಯಗಳನ್ನು ಒದಗಿಸಿ ಗುಣಮಟ್ಟದ ಶಿಕ್ಷಣ ಒದಗಿಸಲು ಒತ್ತು ನೀಡಲಾಗಿದೆ. ಪ್ರತಿ ಪಂಚಾಯಿತಿಗೆ ಒಂದರಂತೆ ಮಕ್ಕಳ ಮನೆ ಆರಂಭಿಸುವ ಉದ್ದೇಶವಿದೆ. ಈ ಕುರಿತು ವಿಧಾನಸಭೆ ಕಲಾಪದಲ್ಲಿ ಪ್ರಸ್ತಾಪ ಮಾಡಿದ್ದು ಇಡೀ ರಾಜ್ಯಕ್ಕೆ ಮಾದರಿ ಆಗಲಿದೆ. ಪಾಲಕರು ಖಾಸಗಿ ಕಾನ್ವೆಂಟ್‌ಗಳ ವ್ಯಾಮೋಹ ತೊರೆದು ಮಕ್ಕಳ ಮನೆಗೆ ತಮ್ಮ ಮಕ್ಕಳನ್ನು ಕಳುಹಿಸಬೇಕು ಎಂದು ಕಿವಿಮಾತು ಹೇಳಿದರು.

ಹಾಸನ ಆಕಾಶವಾಣಿ ಕೇಂದ್ರದ ಪ್ರಸಾರ ನಿರ್ವಾಹಕ ವಿಜಯ್ ಅಂಗಡಿ, ಕಾರ್ಯನಿರ್ವಾಹಕ ಮಧುಸೂಧನ್ ಮಾತನಾಡಿದರು. ಗ್ರಾಪಂ ಉಪಾಧ್ಯಕ್ಷೆ ಸುಮಿತ್ರಮ್ಮ, ಸಿಆರ್‌ಪಿ ಮಲ್ಲಿಕಾರ್ಜುನ, ಬಿಆರ್‌ಪಿ ಶಂಕರ್, ಮುಖ್ಯ ಶಿಕ್ಷಕರಾದ ಜಯಕೇಶವ, ಶಿಕ್ಷಕರಾದ ಲೋಕೇಶ್, ಪದ್ಮ, ಮಮತಾ, ಗ್ರಾಮಸ್ಥರು ಇದ್ದರು.

ವಿವಿಧ ಗ್ರಾಮೀಣ ಕ್ರೀಡೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಗುರುಗಳಿಗೆ ನೆನಪಿನ ಕಾಣಿಕೆ ನೀಡಿ ಗುರು ವಂದನೆ ಸಲ್ಲಿಸಲಾಯಿತು.

# 31 ಗ್ರಾಂ ತೂಕದ ಚಿನ್ನಾಭರಣ ಕಳವು

ಹಾಸನ: ಮನೆಯ ಕಿಟಕಿ ಪಕ್ಕದ ಸೋಫಾ ಮೇಲಿಟ್ಟಿದ್ದ 31 ಗ್ರಾಂ ತೂಕದ ಚಿನ್ನಾಭರಣವಿದ್ದ ವ್ಯಾನಿಟಿ ಬ್ಯಾಗ್ ಅನ್ನು ಕಳವು ಮಾಡಿರುವ ಘಟನೆ ದೇವಮ್ಮ ಬಡಾವಣೆಯಲ್ಲಿ ಮಾ. 8 ರಂದು ನಡೆದಿದೆ.

ಅರಕಲಗೂಡು ತಾಲ್ಲೂಕು ಹೆತ್ತಗೌಡನಹಳ್ಳಿ ಗ್ರಾಮದ ರೇವುಕುಮಾರಿ ಎಂಬುವವರಿಗೆ ಸೇರಿದ ಚಿನ್ನಾಭರಣ ಕಳುವಾಗಿದೆ. ಅವರು ಮಾ. 8 ರಂದು ಸಹೋದರ ನಿಜಗುಣ ಅವರ ಮನೆಗೆ ಬಂದಿದ್ದರು. ರಾತ್ರಿ 10.30ರ ಸಮಯದಲ್ಲಿ ಕಿಟಕಿಯ ಪಕ್ಕ ಸೋಫಾ ಮೇಲೆ ಬ್ಯಾಗ್ ಇಟ್ಟು ಮಲಗಿದ್ದರು. ಬೆಳಿಗ್ಗೆ ಎದ್ದು ನೋಡಿದಾಗ ಬ್ಯಾಗ್‌ನಲ್ಲಿದ್ದ ಬಟ್ಟೆಗಳು ಮನೆಯ ಹೊರಗಡೆ ಬಿದ್ದಿರುವುದು ಗೊತ್ತಾಗಿದೆ. ಅದರಲ್ಲಿದ್ದ 22 ಗ್ರಾಂ ತೂಕದ ಚಿನ್ನದ ಕರಿಮಣಿ ಸರ ಹಾಗೂ 9 ಗ್ರಾಂ ತೂಕದ ಓಲೆ ಜುಮುಕಿ ಕದಿಯಲಾಗಿದೆ. ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248

C M Y K C M Y K C M Y K C M Y K